ಮುಖ್ಯ ಮಂತ್ರಿಯವರಿಂದ ಹೇಳಿಕೆ

ಹಿಂದುಳಿದ ವರ್ಗಗಳಿಂದ ಮಂಡಲ ಪಂಚಾಯಿತಿಗೆ ನಾಮಂಕರಣ ಮಾಡುವ ಕುರಿತು.

ಅಧ್ಯಕ್ಷರು.—ಮಂಡಲ ಪಂಚಾಯಿತಿಗಳಿಗೆ ಹಿಂದುಳಿದ ವರ್ಗಗಳ ನಾಮಕರಣದ ಬಗ್ಗೆ ದಿನಾಂಕ ೨೭ನೇ ಮಾರ್ಚಿ ೮೭ರಂದು ಹೊರಡಿಸಿದ ಅಧಿಸೂಚನೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಅಂತೂ ಇಂತೂ...

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುವುದಕ್ಕೆ ಮೊದಲು ಒಂದು ನಿಮಿಷ ಹೇಳುತ್ತೇನೆ ಈ ವಿಷಯದ ಮೇಲೆ ಬಹಳ ಕೂಲಂಕಷವಾಗಿ ವಿಚಾರ ಮಾಡಿ ತಮ್ಮ ಚರಿತ್ರೆ ಇದರಲ್ಲಿ ಅಳವಡುವುದರಿಂದ, ಈಗಾಗಲೇ ಹೈಕೋರ್ಟ್ ಎಮರ್ಜನ್ಸಿ ನೋಟೀಸ್ ಬೇರೆ ಇಷ್ಯೂ ಆಗಿದೆ. ಇದನ್ನು ಬಹಳ ತರಾತುರಿಯಲ್ಲಿ ಮಾಡಿದ್ದಾರೆಂದು ಗೊತ್ತಾಗುತ್ತದೆ. ತಾವು ಉತ್ತರ ಕೊಡುವಾಗ ಇದನ್ನು ವಿಚಾರ ಮಾಡಿಕೊಳ್ಳುತ್ತಿರೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರ ಮಾತಿನ ಅರ್ಥವನ್ನು ಸರಿಯಾಗಿ ತಿಳಿದುಕೊಂಡರೆ ಉತ್ತರ ಕೊಡುವುದು ಅಗತ್ಯವಿಲ್ಲವೆಂದು ಗೊತ್ತಾಗುತ್ತದೆ. ನಾವೆಲ್ಲಾ ಹೇಳುವಂತಹ ವಿಚಾರಗಳಿಗೆ ಸಾಕಷ್ಟು ಪ್ರಚಾರ ಸಿಕ್ಕಿದೆಯಾದ ಕಾರಣ ಏನೂ ಉತ್ತರ ಬೇಕಾಗಿಲ್ಲವೆಂದು ಅದರ ಅರ್ಥ.

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಏನಿಲ್ಲಾ. ಅವರ ಮನಸ್ಸನ್ನು ತಿಳಿದುಕೊಂಡರೆ ನಾವಿ-ನೇಷನ್ ಕಾಪಾಡುತ್ತೇವೆಂದು ಭಾಸವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಈ ವಿಚಾರ ಹೈಕೋರ್ಟಿನಲ್ಲಿ ಇರತಕ್ಕಂಥದ್ದು ನಿಜ. ಹೈ ಕೋರ್ಟ್‌ನಲ್ಲಿ ಕೊನೆಗೆ ಯಾವ ರೀತಿಯ ತೀರ್ಮಾನವಾಗುತ್ತದೆಯೋ ಅದಕ್ಕೆ ನಾವು ಬದ್ಧವಾಗಿರುತ್ತೇವೆ. ಮತ್ತು ಇದರಲ್ಲಿ ಸಬ್-ಜೂಡೀಸ್ ಆಗುವಂಥ ರೀತಿಯಲ್ಲಿ ನಾನು ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ, ಕಳೆದೆರಡು ದಿವಸದಿಂದ ಇದರ ಮೇಲೆ ಚರ್ಚೆ ನಡೆದಿರುವುದರಿಂದ ಇದೊಂದು ಮಹತ್ವದ ವಿಚಾರವೆಂದು ಇದ್ದರೂ ದುರ್ದೈವದಿಂದ ಆ ಸಮಯದಲ್ಲಿ ನಾನು ಇರಲಿಕ್ಕೆ ಸಾಧ್ಯವಾಗಲಿಲ್ಲ, ಆದರೆ ಪತ್ರಿಕೆಗಳಲ್ಲಿ ಮತ್ತು ಸದನದ ಕಾರ್ಯಕಲಾಪದಲ್ಲಿ ಏನು ವರದಿಯಾಗಿದೆ ಅದನ್ನು ತರಿಸಿ ಮಾನ್ಯ ಸದಸ್ಯರು ಮಾಡಿದಂಥ ಟೀಕೆಗಳನ್ನು ಓದಿದ್ದೇನೆ. ಏಕೆಂದರೆ ಎರಡು ಬಹಳ ತೀಕ್ಷ್ಣವಾದ ಟೀಕೆ ಆಯಿತು. ಮಾನ್ಯ ವಿರೋಧಪಕ್ಷದ ನಾಯಕರಿಂದ ಹಿಡಿದು ಎಲ್ಲರೂ ಒಂದು ಮಾತನ್ನು ಮಾತ್ರ ಅಂದರೆ ಜನತಾಪಕ್ಷಕ್ಕೆ ಹಿಂದುಳಿದ ವರ್ಗಗಳ ಮೇಲೆ ಯಾವುದೇ ರೀತಿಯ ಆಸಕ್ತಿಯಾಗಲಿ ಆಥವಾ ಅವರ ಹಿತವನ್ನು ಸಂರಕ್ಷಣೆ ಮಾಡುವ ಇಚ್ಛೆಯಾಗಲಿ ಇಲ್ಲ. ಇದು ಕೇವಲ ತೋರಿಕೆ, ಇದು ಒಂದು ನಾಟಕ, ಹೇಳತಕ್ಕಂಥದು, ಮೊಸಳೆ ಕಣ್ಣೀರು ಎಂದು ಹೇಳತಕ್ಕದ್ದು ಒಂದು. ಆಮೇಲೆ ಎರಡನೆಯ ವಿಚಾರ ಮಾನ್ಯ ಮೊಯಿಲಿ ಅವರು ಹೇಳಿದರು. ಅವರು ನೀವು ಪ್ರಜಾಪ್ರಭುತ್ವಕ್ಕೆ ವಿರೋಧಿಗಳು. ಪ್ರಜಾ ಪ್ರಭುತ್ವದ ಆಧಾರದ ಮೇಲೆ ಆರಿಸಿಬಂದಂಥ, ಸ್ಥಾಪನೆಯಾದಂಥ ಸಂಸ್ಥೆಗಳಿಗೆ ನೀವು ನಾಮಕರಣವನ್ನು ಏಕೆ ಮಾಡಲು ಇಟ್ಟುಕೊಂಡಿದ್ದೀರಿ ? ಈ ಎರಡು ಮುಖ್ಯವಾದ ಟೀಕೆಗಳು. ಅದರಲ್ಲಿ ಕೆಲವರು ಉಪ್ಪು, ಖಾರ, ಹುಳಿ, ಸೇರಿಸಿ ಬಹಳ ಸಂಶ್ಲಾಘ್ಯವಾದಂಥ ಟೀಕೆಗಳನ್ನು ಮಾಡಿದ್ದಾರೆ. ನಾನು ೨೫ ವರ್ಷದ ಹಿಂದಕ್ಕೆ ಹೋಗುವುದಕ್ಕೆ ಬಯಸುತ್ತೇನೆ. ಅಂದರೆ ೧೯೬೨ನೇ ಇಸವಿಗೆ. ೧೯೬೨ನೇ ಇಸವಿಯಲ್ಲಿ ಇಲ್ಲಿ ಬಾಕಿ ಸದಸ್ಯರಿಗೆ ನೆನಪಿದೆಯೋ ಇಲ್ಲವೊ, ಹೇಳಲಾರೆ. ಆದರೆ ಮಾನ್ಯ ಕೆ. ಹೆಚ್. ಪಾಟೀಲ್ ಅವರಿಗಂತೂ ಇವತ್ತು ನೆನಪಿದೆ ಮತ್ತು ಅವರಂ ಸಂದರ್ಭ ಸಿಕ್ಕಾಗ ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ. ಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ನಾಮಕರಣ ವಿರೋಧವಾದಂತಹ ಒಂದು ಕಾಯಿದೆಯನ್ನು ನಾವು ತಂದೆವು. ಅದು ಎಲ್ಲಾ ಸಹಕಾರ ಸಂಸ್ಥೆಗಳಿಗೆ ಮತ್ತು...

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಆಗ ನೀವೂ ಸಹ ಕಾಂಗ್ರೆಸ್‌ನಲ್ಲಿ ಇದ್ದಿರಿ.

ಶ್ರೀ ರಾಮಕೃಷ್ಣ ಹೆಗಡೆ.—ಕಾಂಗ್ರೆಸ್ಸ್‌ನಲ್ಲಿ ಇದಿದ್ದನ್ನು ತಪ್ಪು ಅಂಶ ಹೇಳಲಾರೆ. ಆದರೆ ಈಗ ಕಾಂಗ್ರೆಸ್ ಹೇಗೆ ಆಗಿದೆ ಎಂದರೆ ಗಂಗಾ ನದಿಯಂತೆ ಕಲ್ಮಶವಾಗಿದೆ. ಹೇಗೆಂದರೆ ಹಿಂದೆ ಗಂಗಾ ನದಿಯ ನೀರನ್ನು ಒಂದು ಸಣ್ಣ ಮಡಿಕೆಯಲ್ಲಿಟ್ಟುಕೊಂಡು ಸಾಯಂಯ ಹೊತ್ತಿನಲ್ಲಿ ಬಾಯಿಗೆ ಬಿಡುತ್ತಿದ್ದರು. ಆದರೆ ಈಗ ಕಾಶಿಯಲ್ಲಿ ಹೋಗಿ ಆ ಗಂಗಾ ನದಿಯ ಒಂದು ತೊಟ್ಟು ನೀರನ್ನು ಕಂಡಿದರೆ ತಕ್ಷಣವೇ ಸತ್ತು ಹೋಗುತ್ತೇವೆ, ಗಂಗಾ ನದಿ ಅಷ್ಟು ಕಲ್ಮಶವಾಗಿದೆ, ಮಲೀನವಾಗಿದೆ. ಆದ್ದರಿಂದ ಈ ಕಾಂಗ್ರೆಸ್ ಎಂಬ ಗಂಗಾ ನದಿಯಲ್ಲಿ ಅನೇಕ ಕೊಳಚೆ ಪ್ರವಾಹಗಳು ಸೇರಿ ಇಂದು ಅದು ಮಲೀನವಾಗಿದೆ. ಮಾನ್ಯ ಕೆ. ಹೆಚ್. ಪಾಟೀಲರೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಹಿಂದೆ ನಾನು ೧೯೬೨ ರಲ್ಲಿ ಸಹಕಾರ ಮಂತ್ರಿಯಾಗಿದ್ದಾಗ ಜಮೀನು ಅಡಮಾನ ಬ್ಯಾಂಕ್ ಎಂದು ಏನು ಕರೆಯುತ್ತಿದ್ದರೂ ಅದರ ಅಧ್ಯಕ್ಷರು ನಾಮಕರಣ ಹೊಂದಿದಂತಹ ಅಧ್ಯಕ್ಷರಾಗಿದ್ದಾರೆ. ಹಾಗೆಯೇ ಈ ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಕೇಂದ್ರ ಬ್ಯಾಂಕುಗಳಲ್ಲಿ ನಾಮಕರಣ ಹೊಂದಿದಂತಹ ಅಧ್ಯಕ್ಷರುಗಳು ಇದ್ದಾರೆ. ಆದ್ದರಿಂದ ಅಧ್ಯಕ್ಷರೆ ನಾಮಕರಣ ಹೊಂದಿದಂತಹ ಅಧ್ಯಕ್ಷರು ಮತ್ತು ಆಫೀಸರ್ಸ್‌ಗಳು ಇದ್ದಾರೆ. ಆಗ ಕೇವಲ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ನಾಮಕರಣ ಇರಲಿಲ್ಲ. ಆಗ ಇದನ್ನು ಅವಮಾನಗ್ರಹವಾಗಿ ಬದಲಾವಣೆ ಮಾಡತಕ್ಕಂತಹ ಒಂದು ನಿರ್ಣಯವನ್ನು ನಾವು ತೆಗೆದುಕೊಂಡೆವು. ಆದೇ ರೀತಿ ಜನರ ಕೈಗೆ ಅಧಿಕಾರವನ್ನು ಕೊಡತಕ್ಕಂತಹ ಪಂಚಾಯತ್ ರಾಜ್ಯವನ್ನು ಸ್ಥಾಪನೆ ಮಾಡತಕ್ಕಂತಹ ಒಂದು ವಿಧೇಯಕವನ್ನು ನಾವು ತಂದೆವು. ಆದರೆ ಈಗ ನೀವು ಈ ಸರ್ಕಾರದ ಮೇಲೆ ನಾನಾ ವಿಧವಾದಂತಹ ಟೀಕೆಯನ್ನು ಮಾಡಿ ಜನತಂತ್ರಕ್ಕೆ ವಿರೋಧವಾದಂತಹ ಕೆಲಸ ಮಾಡುತ್ತಿದೆಯೆಂದು ಕರೆದಿದ್ದೀರಿ.

ಶ್ರೀ ಕೆ. ಹೆಚ್. ಪಾಟೀಲ್.— ಅದಕ್ಕೆ ನಾವು ಮೊದಲೆ ಹೇಳಿದೆವು ನೀವು ಮಾಡಬೇಡಿ ಎಂದು ಹಾಗೂ ಹಿಂದಿನ ಪರಂಪರೆಗೆ ವಿರೋಧವಾಗಿರಬೇಡಿ, ಈ ನಾಮಕರಣವನ್ನು ಬಿಟ್ಟು ಬಿಡಿ ಎಂದು.

ಶ್ರೀ ರಾಮಕೃಷ್ಣ ಹೆಗಡೆ.—ಆದುದರಿಂದ ಮಾನ್ಯ ಅಧ್ಯಕ್ಷರೇ, ಈ ಸರ್ಕಾರಕ್ಕೆ ನಾಮಕರಣದಲ್ಲಿ ವಿಶ್ವಾಸ ಇತ್ತು ಅಥವಾ ನಾಮಕರಣ ಮಾಡಿ ಅದನ್ನು ತನ್ನ ಹತೋಟಿಯಲ್ಲಿ ಸಂಘ-ಸಂಸ್ಥೆಗಳನ್ನು ತೆಗೆದುಕೊಳ್ಳಬೇಕೆಂದು ಇರಲಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಲಿಚ್ಚಿಸುತ್ತೇನೆ. ನಮ್ಮ ಶಾಸನ ಏನು ಇದೆ ಅದರ ಮೂಲ ರೂಪವನ್ನು ತೆಗೆದುಕೊಂಡರೆ ನಮ್ಮ ವಿಧೇಯಕದಲ್ಲಿ ನಾಮಕರಣದ ಬಗ್ಗೆ ಯಾವುದೇ ಒಂದು ಆಸ್ಪದ ಇರಲಿಲ್ಲ. ಅಷ್ಟಲ್ಲದೆ ಮಂಡಲ ಪಂಚಾಯತಿಯಲ್ಲಿ ಹಿಂದುಳಿದ ವರ್ಗದವರಿಗೆ ಒಂದು ಸ್ಥಾನವನ್ನು ಮೀಸಲಿಡಬೇಕೆಂದು ಇತ್ತು. ಇದು ಒಂದೇ ಸಾಕು ಈ ಸರ್ಕಾರದ ಪ್ರಾಮಾಣಿಕತೆಗೆ ಮತ್ತು ಸರ್ಕಾರದ ನೀತಿ ಏನು ಎಂಬುದಕ್ಕೆ. ಆದ್ದರಿಂದ ನಾನಾದರೂ ಹೇಳುವುದೇನೆಂದರೆ ನಾಮಕರಣ ಮಾಡಿ ಈ ಸಂಸ್ಥೆಗಳನ್ನು ನಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಈಗ ನಾವು ಮಂತ್ರಿಮಂಡಲದಲ್ಲಿ ಏನು ವಿಧೇಯಕವನ್ನು ಪಾಸ್ ಮಾಡಿದ್ದೇವೆ ಅದರಲ್ಲಿ ಕೆಲವು ಬದಲಾವಣೆಯಾಗಿದೆ. ಅದನ್ನು ನಾನು ಇಲ್ಲಿ ಓದಿ ಹೇಳುವುದಕ್ಕೆ ಬಯಸುತ್ತೇನೆ, ಏಕೆಂದರೆ ಅದು ಕೆಲವರಿಗೆ ಮಂತೆ ಹೋಗಿರಬಹುದು. ಅದೇನೆಂದರೆ At least not less than one. ಇದು ನಮ್ಮ ಉದ್ದೇಶವನ್ನು ತೋರಿಸುತ್ತದೆ. ಇದರಲ್ಲಿ ನಾಮಕರಣವನ್ನು ಮಾಡಬೇಕೆಂದು ಇದೆ. ಆದರೆ ಇದನ್ನು ಬದಲಾವಣೆ ಮಾಡಿದ್ದುದಕ್ಕೆ ಸೆಲೆಕ್ಟ್ ಕಮಿಟಿಯಲ್ಲಿ ಚರ್ಚೆಯಾದ ಮೇಲೆಯೇ. ಈಗ ಸೆಲೆಕ್ಟ್ ಕಮಿಟಿಯಂ ವರದಿ ನನ್ನ ಹತ್ತಿರ ಇಲ್ಲ ಅದು ಇದ್ದಿದ್ದರೆ ಎಲ್ಲಾ ಗೊತ್ತಾಗುತ್ತಿತ್ತು. ಇದನ್ನು ಯಾರು ತಂದರೋ ಏಕೆ ತಂದರೋ ಯಾವ ಕಾರಣಕ್ಕಾಗಿ ತಂದರೋ ನನಗೆ ಗೊತ್ತಿಲ್ಲ. ಕ್ಲಾಸ್ ೫, ಸಬ್ ಕ್ಲಾಸ್ ೫ನ್ನು ಇದರ ರೂಪಾಂತರ ಹೇಗೆ ಆಯಿತು ಎಂಬುದನ್ನು ಈಗ ಓದಿ ಹೇಳುತ್ತೇನೆ.

> "The Committee are of the opinion that where no person belonging to Backward class is elected, two persons belonging to the said class shall be nominated."

ಕಮಿಟಿಯ ವರದಿಯಲ್ಲಿ ಇದು ಬಂದಿದೆ. ಯಾವ ಒಂದು ಬಿಲ್‌ನ್ನು ನಾವು ಕಮಿಟಿಯ ವರದಿಯನ್ನು ಶಿಫಾರಸ್ಸಿನ ಮೇಲೆ ಅಳವಡಿಸಿಕೊಂಡು ತಂದಿದ್ದೇವೆ. ಅದರಲ್ಲಿ ಹೇಗೆ ಇದೆಯೆಂದರೆ.—

"Where no person belonging to backward classes is elected to the Mandal Panchayat, Government shall nominate two persons belonging to the said classes to the Mandal Panchayat."

ಗೌರ್ನಮೆಂಟ್‌ಗೆ ಈ ಅಧಿಕಾರವನ್ನು ಕೊಟ್ಟವರು ಯಾರು? ಇದು ಏನಾದರೂ ತಮಗೆ ತಿಳಿದಿದೆಯೇ? ಇದರ ಬಗ್ಗೆ ತಾವುಕ್ಷಿಏನಾದರೂ ಯೋಚನೆ ಮಾಡಿದ್ದೀರಾ? ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಿತಿಗಳ ಶಾಸನದ ಮೂಲ ಮಸೂದೆಯಲ್ಲಿ ನಾಮಕರಣಕ್ಕೆ ಯಾವುದೇ ಆಸ್ಪದ ಇರಲಿಲ್ಲ. ನಾಮಿನೇಷನ್ ಮಾಡತಕ್ಕಂಥ ಅಧಿಕಾರವನ್ನು ಕೈಯ್ಯಲ್ಲಿ ಇಟ್ಟುಕೊಂಡು, ವಿರೋಧ ಪಕ್ಷದವರೂ ನಾನು ಸಮನಾಗಿ ಆರಿಸಿಬಂದು, ಅಂತಹ ಮಂಡಲಿಗಳಲ್ಲಿ ನಾಮಿನೇಷನ್ ಮಾಡಿ ಅವುಗಳನ್ನು ನಮ್ಮ ಕೈಯ್ಯಲ್ಲಿ ತೆಗೆದುಕೊಳ್ಳುವುದು ಎಂದು ಯೋಜನೆ ಮಾಡಿದ್ದೇವೆಯೇ? ಆ ಹೊತ್ತಿನಲ್ಲಿ ಯಾರೂ ಇದನ್ನು ಯೋಚನೆ ಮಾಡಲಿಲ್ಲ. ಆದರೆ ಸರ್ಕಾರ ನಾಮಿನೇಟ್ ಮಾಡಬೇಕೆನ್ನತಕ್ಕಂಥದ್ದಕ್ಕೆ ರಿಸರ್ವೇಷನ್ ಬೇಡ ಎಂದು ಮಾಡುವುದಕ್ಕೆ ಯಾರು ಈ ಸೂಚನೆ ಮಾಡಿದ್ದಾರೋ ಅವರ ಮನಸ್ಸಿನಲ್ಲಿ ಒಂದ ಬಲವಾದಂಥ ಕಾರಣ ಇದೆ. ಆ ಸೂಚನೆಯನ್ನು ನಮ್ಮ ಪಕ್ಷದವರು ಮಾಡಿದ್ದಲ್ಲ. ಆಮೇಲೆ ಗೌರ್ನಮೆಂಟ್ ನಾಮಿನೇಟ್ ಮಾಡಬೇಕೆಂದು ಹೇಳಿ ಆಯಿತು. ಮತ್ತೆ ನಮ್ಮ ಮೇಲೆ ಒಂದು ಆರೋಪ ಮಾಡಿದ್ದಾರೆ. ಅದೇನೆಂದರೆ ಜಿಲ್ಲಾಪರಿಷತ್ತು ಇದರ ಅಧಿಕಾರ ಏನಿದೆ ಅದನ್ನು ಸರ್ಕಾರದವರು ತಮ್ಮ ಕೈಯಲ್ಲಿ ತೆಗೆದಂಕೊಳ್ಳುತ್ತಿದ್ದಾರೆ ಎಂದ. ಈ ವಿಚಾರವನ್ನು ಹಿಂದಿನ ಸಲವೇ ನಾನು ಹೇಳಿದ್ದೆ. ಇದು ಕೆಲ ಜನರ ಅಭಿಪ್ರಾಯವಾಗಿದೆಯೇ? ಜಿಲ್ಲಾ ಪರಿಷತ್‌ನಲ್ಲಿ ಯಾವ ರೀತಿ ಕಾಯಿದೆ ಬದ್ಧವಾಗಿ ನಾಮಿನೇಟ್ ಮಾಡಬೇಕು, ಅದು ಸಾಧ್ಯವಾಗದೇ ಇರಬಹುದು, ಅದಕ್ಕಾಗಿ ಸರ್ಕಾರ ನಾಮಿನೇಟ್ ಮಾಡಬೇಕೆಂದು ಇತ್ತು. ಆದರೆ ಅದರ ಮೂಲವನ್ನು ಕಂಡು ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಹೋದಾಗಲೇ ಅದರಲ್ಲಿ ಸರ್ಕಾರವೇ ನಾಮಿನೇಟ್ ಮಾಡಬೇಕೆಂದಿತ್ತು. ಅದನ್ನು ಬದಲಿಸಿ ನಾವು ಜಿಲ್ಲಾಪರಿಷತ್ತು ನಾಮಿನೇಟ್ ಮಾಡಬೇಕೆಂದು ಹೇಳಿದೆವು. ಇದು ಮೊನ್ನೆ ತಾನೇ ಅಂಗೀಕಾರವಾಯಿತು. ಆ ಸೂಚನೆಯನ್ನು ತಂದವರು ಯಾರು? ಈ ಸೂಚನೆಯನ್ನು ಮಾನ್ಯ ವಿರೋಧ ಪಕ್ಷದವರೂ ತರಲಿಲ್ಲ. ಈ ಸೂಚನೆಯನ್ನು ತಂದವರು ಜನತಾ ಪಕ್ಷದವರಾದ ಸಿ. ಎಂ. ಉದಾಸಿ ಮತ್ತು ಜಿ. ಎಸ್. ಬಾಗಲಕೋಟೆ ಅವರು. ಅವರ ಅಭಿಪ್ರಾಯದಲ್ಲಿ ವಿಕೇಂದ್ರೀಕರಣ ಮಾಡಬೇಕೆಂದು ಹೇಳಿ ಈ ಒಂದು ಹೊಸ ಕಾಯಿದೆಯನ್ನು ತಂದಿದ್ದಾರೆ. ಈ ವಿಕೇಂದ್ರೀಕರಣ ಕಾಯಿದೆಯಲ್ಲಿ ನಾಮಿನೇಟ್ ಮಾಡತಕ್ಕಂಥ ಅಧಿಕಾರವನ್ನು ಕೇಂದ್ರ ಸರ್ಕಾರ ಇಟ್ಟುಕೊಂಡಿದೆ. ಅಂದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಕೇಂದ್ರ ಸರ್ಕಾರ ಇದನ್ನು ಇಟ್ಟುಕೊಂಡಿದೆ. ಇದು ವಿರೋಧಭಾಸವಾಗುತ್ತದೆ. ಅದಕ್ಕಾಗಿ ಇದನ್ನು ನೀವು ಜಿಲ್ಲಾ ಪರಿಷತ್ತಿಗೆ ಕೊಡಬೇಕೆಂದು ಹೇಳಿ ಒಂದು ಸೂಚನೆಯನ್ನು ತಂದಿದ್ದಾರೆ. ಆ ಸೂಚನೆಯನ್ನು ಈ ಸಭೆಯು ಚರ್ಚೆಯಾದನಂತರ ಒಪ್ಪಿಕೊಂಡಿತು. ಮಾನ್ಯ ಮೊಯಿಲಿಯಪ್ಪರಿಂದ ಈ ಸೂಚನೆ ಬರಲಿಲ್ಲ. ಆದುದರಿಂದ ನಮ್ಮ ಬೋನಾಫೈಡ್ಸ್ ನಮ್ಮ ಪ್ರಾಮಾಣಿಕತೆಯನ್ನು ಇನ್ನು ಯಾವ ರೀತಿ ಹೊರೆಗಲ್ಲು ಹಚ್ಚಬೇಕು. ಇದಕ್ಕಿಂತ ಬೇರೆ ಹೊರೆಗಲ್ಲು ಯಾವುದಿದೆ?

ನೀವು ಹಿಂದುಳಿದವರ ವರ್ಗದವರು ಇದುವರೆಗೆ ಆರಿಸಿ ಬಂದಿದ್ದೀರಿ. ಆದರೆ ಈಗ ಕಾಲ ಬದಲಾವಣೆಯಾಗುತ್ತಾ ಇದೆ. ನಾನು ಈ ಮಾತನ್ನು ನಿಮ್ಮನ್ನು ಕೇಳಿದರೆ ನಮ್ಮನ್ನು ಕುಕ್ಕತ್ತೀರಿ ಎಂದು ನೀವು ಹೇಳಬಹುದು. ಈ ಮಂಡಲ ಕಮೀಷನ್ ವರದಿ ಬಂದು ಎಷ್ಟು ವರ್ಷವಾಯಿತು? ಹಿಂದುಳಿದವರ ವರ್ಗದವರ ಬಗ್ಗೆ ಕಣ್ಣೀರು ಏನು ಸುರಿಸುತ್ತಾ ಇದ್ದೀರಿ. ಇದು ಮೊಸಳೆ ಕಣ್ಣೀರು ಅಥವಾ ಯಾವ ಕಣ್ಣೀರೊ, ಸುರಿಸುವುದಕ್ಕೆ ಶುರು ಮಾಡಿ ಎಷ್ಟೋ ವರ್ಷವಾಯಿತು. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಇವರ ಬಗ್ಗೆ ಒಂದು ಆಂಧೋಳನ ಆಯಿತು. ಬರೀ ದಕ್ಷಿಣ ಭಾರತದಲ್ಲೇ ಈ ಹಿಂದುಳಿದವರ ವರ್ಗದವರ ಆಂಧೋಳನ ನಡೆಯಿತು. ಆದರೆ ಉತ್ತರ ಭಾರತದಲ್ಲಿರುವವರು ಇಡೀ ಭಾರತವನ್ನು ಆಳತಕ್ಕಂಥಾವರು ಎನ್ನುವುದು 'ಗೊತ್ತು' ಹಿಂಗಿದ್ದರೂ

ಕೂಡ ಆವರ ತಲೆಯಲ್ಲಿ ಈ ಹಿಂದುಳಿದ ವರ್ಗದವರ ಬಗ್ಗೆ ಮೀಸಲಾತಿ ಇಡಬೇಕು. ಎನ್ನುವುದು ಬರಲಿಲ್ಲ ಏತಕ್ಕೆ ? ಈ ಮಂಡಲ ಕಮೀಷನ್ ನೇಮಕ ಯಾವಾಗ ಆಯಿತು ? ನಾವು ಸ್ವಾತಂತ್ರ್ಯ ಪಡೆದು ೩೦ ವರ್ಷ ಆದನಂತರ ಆದದ್ದು. ಇದು ಜಾರಿಗೆ ೧೯೭೭ನೇ ಇಸವಿಯಲ್ಲೇ ಬರಬೇಕಾಗಿತ್ತು. ಜನತಾ ಸರ್ಕಾರ ಬರಬೇಕಾಯಿತು ಮಂಡಲ ಕಮೀಷನ್ ವರದಿ ಬಂದಿದೆ ; ಆ ವರದಿ ಬಂದಮೇಲೆ ಅದನ್ನು ಅದನ್ನು ಜಾರಿಗೆ ತರುವುದಕ್ಕೆ ಎಷ್ಟು ಕಾಲ ಬೇಕಾದೀತು ? ಅನೇಕ ಜನ ಸಂಸತ್ ಸದಸ್ಯರು ಆ ವರದಿಯಲ್ಲಿ ಏನು ಇದೆ ನೋಡೋಣ ಎಂದು ಕೇಳಿದರು. ಈಗತಾನೇ ಮಾನ್ಯ ಕಾನೂನು ಮಂತ್ರಿಗಳು ಹೇಳಿದರು ಏನೆಂದರೆ ವರದಿ ಬಂದ ಆರು ತಿಂಗಳೊಳಗೆ ಸದನದ ಮುಂದೆ ಇಡಬೇಕು ಎಂದು ಇದೆ ಎಂದು. ಆದರೆ ಅವರು ಎರಡು ವರ್ಷವಾದರೂ ಈ ವರದಿಯನ್ನು ಇಟ್ಟಿಲ್ಲ ಏತಕ್ಕೆ ? ಇದೇನು ಮಿಶ್ರ ಕಮೀಷನ್ ವರದಿಯೇ ? ಮಿಶ್ರ ಕಮೀಷನ್ ವರದಿಯನ್ನು ಹತ್ತಿಕ್ಕಲಿಕ್ಕೆ ಒಂದು ಹೊಸ ಕಾಯಿದೆ ತಂದರು. ಅದೆಲ್ಲಾ ಏನಿತ್ತು ? ಈ ಹಿಂದುಳಿದ ವರ್ಗದವರ ಬಗ್ಗೆ ಮಂಡಲ್ ಕಮೀಷನ್ ಏನು ಮಾಡಿದರು ನಾನು ಮತ್ತೆ ಇದರ ಬಗ್ಗೆ ಹೇಳಿದರೆ ತಾವೇನೂ ತಿಳಿದುಕೊಳ್ಳಬಾರದೇ ಇದನ್ನು ಮುಚ್ಚಿಡಲಿಕ್ಕೆ ಕಾರಣ ಏನು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕೇಂದ್ರ ಸರ್ಕಾರದವರು ಮಂಡಲ ಕಮೀಷನ್ ವರದಿಯನ್ನು ಏನು ಮಾಡಿದರು ಎಂದು ತಿಳಿಸಿದಿರಿ, ನೀವು ವೆಂಕಟಸ್ವಾಮಿ ಆಯೋಗದ ವರದಿಯನ್ನು ಕಥಂ ಮಾಡಿದ್ದೀರಿ ಅದು ಸರಿಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾವನೂರು ಕಮೀಷನ್ ವರದಿ ಏನು ಇತ್ತು ಅವರು ಕೊಟ್ಟಿರತಕ್ಕ ವರದಿ ಸರಿಯಿರಲಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಹಾವನೂರ್‌ರವರು ಈ ಮನೆಯ ಸದಸ್ಯರಾಗಿದ್ದರೆ ನಿಮ್ಮ ಪ್ರಶ್ನೆಗೆ ಅವರೇ ಉತ್ತರ ಕೊಡುತ್ತಿದ್ದರು ನಾನೇನೂ ಕೊಡಬೇಕಾಗಿಲ್ಲ. ಆಗ ಅವರು ನಿಮ್ಮ ಜೊತೆಯಲ್ಲೇ ಇದ್ದರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಅವರು ನಿಮ್ಮ ಜೊತೆಯಲ್ಲೇ ಇದ್ದಾರೆ ವೆಸ್ಟ್ ಬೆಂಗಾಲ್‌ನಲ್ಲಿ ಅವರು ನಿಮ್ಮ ಜೊತೆಯಲ್ಲೇ ಇದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ನಿಮ್ಮ ಜೊತೆ ಏತಕ್ಕೆ ಬಿಟ್ಟರು ? ನಿಮ್ಮಿಂದ ಅವರನ್ನು ನಾವು ಕಸಿದುಕೊಂಡು ಬಂದಿದ್ದೆವೆಯೇ ? ನಿಮ್ಮ ಜೊತೆ ಬಿಟ್ಟಿರುವುದಕ್ಕೆ ಕಾರಣ ಬೇಕಲ್ಲಾ ? ತಮಗೆ ಹೇಳಬೇಕಾದರೆ ವೆಂಕಟಸ್ವಾಮಿ ಆಯೋಗದ ವರದಿಯನ್ನು ನಾವು ಒಪ್ಪಲಿಲ್ಲ, ಅದನ್ನು ಒಪ್ಪದೇ ಇರಲಿಕ್ಕೆ ಕಾರಣ ಏನು ಎನ್ನುವುದನ್ನು ಇಡೀ ನಮ್ಮ ರಾಜ್ಯಕ್ಕೆ ಅಲ್ಲ ಇಡೀ ನಮ್ಮ ದೇಶಕ್ಕೆ ಆದರ ಬಗ್ಗೆ ನಾವು ಹೇಳಿದ್ದೇವೆ. ನಾವು ಒಂದು ಹೊಸ ಫಾರ್ಮುಲಾ ಒಪ್ಪಿದ್ದೇವೆ. ಆ ಪ್ರಕಾರ ಯಾರು ಹಿಂದುಳಿದ ವರ್ಗದಲ್ಲಿರುತ್ತಾರೋ ಅವರಿಗೆ ಎಳ್ಳಷ್ಟೂ ಕೂಡ ಧಕ್ಕೆ ಆಗಿಲ್ಲ. ಗ್ರೂಪ್ ಎ ನಲ್ಲಿ ೬೧ ಜಾತಿ ಇದೆ ಅವರ ಜನಸಂಖ್ಯೆ ಪ್ರಮಾಣ ೪.೭೩ ಅವರಿಗೆ ನಾವು ರಿಸರ್ವೇಷನ್ ಮಾಡಿರುವುದು ೫ ಪರ್ಸೆಂಟ್ ಎಂದರೆ ಸರಾಸರಿ ಅದರಲ್ಲಿ ೧೦೫ ಪರ್ಸೆಂಟ್ ಕವರೇಜ್ ಆಗಿದೆ. ಇನ್ನು ಗ್ರೂಪ್ ಬಿ ನಲ್ಲಿ ೧೩೮ ಜಾತಿಗಳು ಇವೆ. ಅವರ ಪಾಪ್ಯುಲೇಷನ್ ಜನಸಂಖ್ಯೆ ೧೯.೩೪ ಅವರಿಗೆ ರಿಸರ್ವೇಷನ್ ಮಾಡಿರತಕ್ಕಂಥಾದ್ದು ೧೫ ಪರ್ಸೆಂಟ್ ಅಥವಾ ೧೩ ಪರ್ಸೆಂಟ್ ಇರಬಹುದು. ಇದರಲ್ಲಿ ೭೫.೫ ಪರ್ಸೆಂಟೇಜ್ ಕವರ್ ಆಗಿದೆ. ಇದರಲ್ಲಿ ಯಾರಿಗೆ ಏನು ನಷ್ಟವಾಗಿದೆ ಎಂದು ನಾನು ಕೇಳುತ್ತೇನೆ. ಆದುದರಿಂದ ನಾವು ವೆಂಕಟಸ್ವಾಮಿ ಆಯೋಗದ ವರದಿಯನ್ನು ರದ್ದು ಮಾಡಿದ್ದುದು. ನಾನು ಕೇಳುತ್ತೇನೆ ಯಾವುದೇ ಕಮೀಷನ್ ಮಾಡಲಿ ಅದು ಕೇವಲ ಒಂದು ಜಾತಿ ಆಧಾರದ ಮೇಲೆ ಹಿಂದುಳಿದ ವರ್ಗದವರನ್ನು ಡಿಟರ್‌ಮಿನ್ ಮಾಡುವುದಾದರೆ ಅದು ನಿಜವಾಗಿ ಹಿಂದುಳಿದ ಕೆಲವರಿಗೆ ಅನ್ಯಾಯವಾಗುತ್ತದೆ. ಈ ಮಾತನ್ನು ನಾನು ಪುನಃ ಪುನಃ ಹೇಳುವ ಅಗತ್ಯವಿಲ್ಲ. ಆದರೆ ನಿನ್ನೆ ಮೊನ್ನೆ ಇದರ ಬಗ್ಗೆ ನಡೆದಂಥ ಚರ್ಚೆಗೆ ಉತ್ತರ ರೂಪವಾಗಿ ನಾನು ಈ ಮಾತನ್ನು ಹೇಳಲೇಬೇಕು.

ಳ-೩೦ ಪಿ.ಎಂ.

ಈಗ ನಿರ್ಗತಿಕರು ಒಂದೇ ಜಾತಿಯಲ್ಲಿರುತ್ತಾರೆಯೇ ? ಭೂರಹಿತ ಕಾರ್ಮಿಕರು ಏನಿದ್ದಾರೆ, ಅವರು ಕೇವಲ ಒಕ್ಕಲಿಗರಲ್ಲಿ ಮತ್ತು ಲಿಂಗಾಯಿತರಲ್ಲಿ ಇರುವುದಿಲ್ಲವೇ ? ಬೇರೆ ಬೇರೆ ಜಾತಿಗಳಲ್ಲಿ ಇರಂವುದಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಆದರೆ ಪರ್ಸೆಂಟೇಜ್ ಕಡಿಮೆ.

ಶ್ರೀ ರಾಮಕೃಷ್ಣ ಹೆಗಡೆ.—ಆದ್ದರಿಂದಲೇ ನಾವು ಎಲ್ಲರಿಗೂ ಪ್ರಾತಿನಿಧ್ಯ ಕೊಡುವಂತಹ ನಿರ್ಣಯವನ್ನು ಮಾಡಿಲ್ಲ. ಒಂದುವೇಳೆ ಇಲ್ಲಿ ಜಾತಿಯ ಹೆಸರಿನಲ್ಲಿ ಸೇರಿಸಿದ್ದರೆ ನೀವು ಹೇಳಿದ ಮಾತನ್ನು ಒಪ್ಪುತ್ತಿದ್ದೆ. ಆ ರೀತಿ ಏನಾದರೂ ನಿರ್ಣಯ ಮಾಡಿದ್ದರೆ ನನಗೆ ಇಲ್ಲಿ ನಿಂತು ಮಾತನಾಡುವ ಧೈರ್ಯ ಬರುತ್ತಿರಲಿಲ್ಲ ನಾವು ಯಾವ ರೀತಿಯಲ್ಲಿ ಹಿಂದುಳಿದ ವರ್ಗದವರಿಗೆ ಧಕ್ಕೆ ಬರುವ ರೀತಿಯಲ್ಲಿ ನಿರ್ಣಯ ಮಾಡಿದ್ದೇವೆಯೇ ? ನಮ್ಮ ಮಾನ್ಯ ಮೊಯಿಲಿ ಅವರು ಇಲ್ಲಿ ಇದರ ಬಗ್ಗೆ ಬಹಳ ಬಿರುಸಾದ ಮಾತನ್ನು ಆಡಿದ್ದಾರೆ. ಇದರ ಬಗ್ಗೆ ಸಿ.ಬಿ.ಐ. ತನಿಖೆ ಆಗಬೇಕೆಂದು ಹೇಳಿದ್ದಾರೆ. ಇದಕ್ಕೆ ಸಿ.ಬಿ.ಐ. ತನಿಖೆ ಏತಕ್ಕೆ ಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಫೇರ್‌ಫಾಕ್ಸ್ ಕಥೆ ಏನು ನಡೆಯುತ್ತಿದೆ. ಅದರ ಬಗ್ಗೆ ಸಿ.ಬಿ.ಐ. ತನಿಖೆ ಆಗಬೇಕು ;

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮೊಯಿಲಿ ಅವರು there must be a willingness to respect others point of view ಎಂದು ಹೇಳಿದ್ದಾರೆ. ಆದರೆ ಇವರು ತಮ್ಮ ದಿನನಿತ್ಯದಲ್ಲಿ ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂದರೆ, ಕಳೆದ ೫ ದಿವಸಗಳಿಂದ ಒಂದೇ ವಿಷಯ ಲೋಕಸಭೆಯಲ್ಲಿ ಚರ್ಚೆಗೆ ಬರುತ್ತಿದೆ. ಈ ಬಗ್ಗೆ ಪ್ರಿವಿಲೇಜ್ ಸೂಚನೆಯನ್ನು ಅಡ್ಮಿಟ್ ಮಾಡಿಕೊಳ್ಳಬೇಕೆಂದು ಅಲ್ಲಿನ ವಿರೋಧಪಕ್ಷದವರು ಕೇಳಿಕೊಳ್ಳುತ್ತಾ ಇದ್ದಾರೆ. ಆದರೆ ಅದಕ್ಕೆ ಒಪ್ಪಿಗೆ ಕೊಟ್ಟಿಲ್ಲ. Capacity for

ಶ್ರೀ ಎಸ್. ಬಂಗಾರಪ್ಪ.—ಯಾವುದೋ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಬೇರೆ ಕಡೆ ತಂದಂಥ ನಿಲುವಳಿ ಸೂಚನೆ ವಿಚಾರ ಇಲ್ಲಿ ಹೇಗೆ ಪ್ರಸ್ತಾಪಕ್ಕೆ ಬರುತ್ತದೆ ?

(ಗೊಂದಲ)

ಅಧ್ಯಕ್ಷರು.—ಮೊದಲು ಅವರು ಉತ್ತರ ಕೊಡಲಿ, ನಂತರ ನೀವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಬೇರೆ ಕಡೆ ೫ ದಿವಸಗಳಿಂದ ಚರ್ಚೆಯಾಗುತ್ತಿದ್ದರೆ, ಅದನ್ನು ಇವರು ಇಲ್ಲಿ ಏತಕ್ಕೆ ಪ್ರಸ್ತಾಪ ಮಾಡಬೇಕು ?

ಶ್ರೀ ವೇದಾಂತ ಹೆಬ್ಬಿಗೆ.—ಕೇಂದ್ರದ ಹೆಸರು ಹೇಳಿದರೆ ಇವರಿಗೆ ಬರೆ ಹಾಕಿದಂತೆ ಆಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ —ಮತ್ತೆ ಇವರು ಈ ಸರ್ಕಾರಕ್ಕೆ ಕೊಟ್ಟಂತಹ ಭರವಸೆಗಳನ್ನು ಈಡೇರಿಸುವ ಮನಸ್ಸು ಇಲ್ಲ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಮಗೆ ಮಾನ್ಯ ಮೊಯಿಲಿ ಅವರ ಸರ್ಟಿಫಿಕೇಟ್ ಬೇಕಾಗಿಲ್ಲ. ನಾವು ಜನತೆಯ ಸರ್ಟಿಫಿಕೇಟ್‌ಗೆ ಹೆಚ್ಚು ಬೆಲೆ ಕೊಡುತ್ತೇವೆ. ಕಳೆದ ನಾಲ್ಕು ವರ್ಷಗಳಲ್ಲಿ ಒಂದಲ್ಲ, ಎರಡಲ್ಲ. ಮೂರಲ್ಲ, ನಾಲ್ಕಲ್ಲ, ಐದು ಸಾರ್ವತ್ರಿಕ ಚುನಾವಣೆಗಳು ನಮ್ಮ ರಾಜ್ಯದಲ್ಲಿ ನಡೆದವು. ಬೇರೆ ಯಾರ ಕಾಲದಲ್ಲಿಯೂ ಇಷ್ಟೊಂದು ಸಾರ್ವತ್ರಿಕ ಚುನಾವಣೆಗಳು ನಡೆದಿರಲಿಲ್ಲ. ಆ ರೀತಿ ನಮ್ಮ ಕಾಲದಲ್ಲಿ ಇಷ್ಟು ಚುನಾವಣೆಗಳು ನಡೆದವು ಮತ್ತು ಈ ಚುನಾವಣೆಗಳಲ್ಲಿ ನಮ್ಮ ಪಕ್ಷ ಜನರ ವಿಶ್ವಾಸವನ್ನು ಗಳಿಸಿಕೊಂಡು ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಕೆಲವೊಂದು ಚುನಾವಣೆಗಳನ್ನು ನಡೆಸಲೇಬೇಕಾಗಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಜನತೆಗೆ ಕೊಟ್ಟಂತಹ ಭರವಸೆಗಳನ್ನು ಮತ್ತು ಜನತೆಗೆ ಕೊಟ್ಟಂತಹ ಮಾತನ್ನು ನಡೆಸದೇ ಹೋಗಿದ್ದರೆ ಜನರು ನಮ್ಮನ್ನು ಪುನ: ಆರಿಸುತ್ತಿರಲಿಲ್ಲ ಈ ಸಲದ ಬಜೆಟ್ ಭಾಷಣದಲ್ಲಿ ನಾವು ಜನತೆಗೆ ಯಾವ ಯಾವ ಮಾತನ್ನು ಕೊಟ್ಟಿದ್ದೆವೋ ಅದರಲ್ಲಿ ಯಾವು

ಯಾವುದನ್ನು ಜಾರಿಗೆ ಕೊಟ್ಟಿದ್ದೇವೆ ಎಂಬುದನ್ನು ನಿಮ್ಮ ಮುಖ ಕನ್ನಡಿಯಲ್ಲಿ ಕಾಣುವ ಹಾಗೆ ಏವರ ಗಳನ್ನು ಕೊಟ್ಟಿದ್ದೇವೆ. ಈ ರೀತಿ ಬೇರೆ ಯಾವ ಸರ್ಕಾರ ಸಹ ಕೊಟ್ಟಿರಲಿಲ್ಲ.

ಶ್ರೀ ಕೆ ಎಚ್. ಶ್ರೀನಿವಾಸ್.–ನೀವು ಜನತೆಗೆ ಭರವಸೆಗಳನ್ನು ಕೊಟ್ಟವೇಲೆ ಅದನ್ನು ನೆರವೇರಿಸ ಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಸರ್ಕಾರವಿದ್ದಾಗ ಬಜೆಟ್ ಭಾಷಣದ ಜೊತೆಗೆ ಇಂಥಾದ್ದನ್ನು ಪ್ರತ್ಯೇಕವಾಗಿ ಕೊಟ್ಟಿತ್ತೇ ? ಆಮೇಲೆ ಮಾನ್ಯ ಶ್ರೀನಿವಾಸ್ ಅವರು ದುರಾಸೆ ನಿಮ್ಮ ಬೆನ್ನು ಹತ್ತಿದೆ, ಇದರಿಂದ ನೀವು ಅತ್ಮ ವಂಚನೆ ಮಾಡಿಕೊಳ್ಳುತ್ತೀರಿ ಎಂದು ಹೇಳಿದ್ದಾರೆ. ಅಧಿಕಾರ ದಲ್ಲಿ ಶಾಶ್ವತವಾಗಿ ಉಳಿಯುತ್ತೇವೆ ಎಂಬ ಭ್ರಮೆ ನಿಮಗಿದೆ ಎಂದು ಹೇಳಿದ್ದಾರೆ. ನಮಗೆ ಆ ಭ್ರಮೆ ಇಲ್ಲ. ಈ ನಮ್ಮ ಪಕ್ಷ ಅಂತಹ ಕೆಲಸವನ್ನು ಮಾಡಲಿಲ್ಲ. ಅಂತಹ ಕೆಲಸವನ್ನು ಮಾಡಿದವರು ಯಾರು ಎಂದರೆ, ೧೯೭೫ನೇ ಇಸವಿಯಲ್ಲಿ ಯಾರದು ಚುನಾವಣೆಯಲ್ಲಿ ಆರಿಸಿ ಬಂದಿದ್ದು ಕೋರ್ಟಿನಲ್ಲಿ ರದ್ದಾಯಿತೋ, ಅವರು ಹೇಗಾದರೂ ಮಾಡಿ ಅಧಿಕಾರದಲ್ಲಿ ಅಂಟಿಕೊಂಡಿರಬೇಕು ಎಂಬ ಒಂದೇ ಒಂದು ಉದ್ದೇಶದಿಂದ ಹೈಕೋರ್ಟಿನ ಜಡ್ಜ್‌ಮೆಂಟ್‌ನ್ನು ರದ್ದು ಮಾಡುವಂತಹ ತಿದ್ದುಪಡಿಯನ್ನು ತಂದರು. ಇಂತಹ ಒಂದು ತಿದ್ದುಪಡಿಯನ್ನು ತಂದವರು ಯಾರು ? ಏಕೆ ಆ ಮಾತು ಆಡುತ್ತೀರಿ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿಮಗೆ ಸೀಮಿತವಾಗಿ ಇಲ್ಲ ಹೇಳಬೇಕೇಹೊರತು ಬೇರೆ ಯಂದನ್ನು ಇಲ್ಲಿ ತರಬಾರದು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ಜನತಾಪಕ್ಷದವರು ಏನು ಮಾಡಿದರು, ನಾವು ಏನು ಮಾಡಿದೆವು ಎನ್ನುವುದರ ಬಗ್ಗೆ ಡಿಬೇಟ್ ಇಡಿ.

(ಗೊಂದಲ)

ಅಧ್ಯಕ್ಷರು.—ತಮಗೆ ಕೇಳುವಷ್ಟು ಸೌಜನ್ಯ ಇಲ್ಲವೇ. ಈಗ ಯಾವುದನ್ನು ರಿಕಾರ್ಡ್ ಮಾಡುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದಕ್ಕೆ ಒಂದು ಅವಕಾಶಮಾಡಿ, ಚರ್ಚೆ ಮಾಡೋಣ.

ಅಧ್ಯಕ್ಷರು.—ನಾನು ಹೇಳುವುದನ್ನು ಕೇಳಿ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುವವರೆಗೂ ನಾನು ಯಾರಿಗೂ ಅಲೋ ಮಾಡುವುದಿಲ್ಲ. ಈಗ ನೀವು ಏನೇ ಹೇಳಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಬಂಗಾರಪ್ಪನವರೇ ನೀವು ಏನೇ ಹೇಳಿದರೂ ರಿಕಾರ್ಡ್‌ಗೆ ಹೋಗುವುದಿಲ್ಲ. ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳಲಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಏನೇನು ಮಾಡಿದ್ದಾರೆ. ನಾವು ಏನೇನು ಮಾಡಿದ್ದೇವೆ ಎನ್ನುವುದನ್ನು ಹೇಳುವುದಕ್ಕೆ ಎರಡು ದಿವಸ ಫಿಕ್ಸ್ ಮಾಡಿ.

ಅಧ್ಯಕ್ಷರು.—ಎಲ್ಲರೂ ಈಗ ಕುಳಿತುಕೊಳ್ಳಿ.

ಶ್ರೀ ಜಿ ನಾರಾಯಣ ಕುಮಾರ್.—ಮಾನ್ಯ ಬಂಗಾರಪ್ಪನವರು ಮೂರು ಸಾರಿ ಕಾಂಗ್ರೆಸ್ ಬಿಟ್ಟು ಮೂರು ಸಾರಿ ಸೇರಿಕೊಂಡಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಚೀಫ್ ಮಿನಿಸ್ಟರ್ ಕಾಂಗ್ರೆಸ್ಸನ್ನು ಬಿಟ್ಟವರು ಇಲ್ಲೇ ಇದ್ದಾರೆ, * * ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ..

ಅಧ್ಯಕ್ಷರು.—ಯಾರು ಏನು ಹೇಳಿದರೂ ರಿಕಾರ್ಡ್‌ಗೆ ಹೋಗುವುದಿಲ್ಲ. ಆ ಪದಗಳನ್ನು expunge ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು.—ತಾವು ಕಂಪಿತುಕೊಳ್ಳಿ. ನತಿಂಗ್ ವಿಲ್‌ಬಿ ರಿಕಾರ್ಡೆಡ್ ಈಗ ಯಾರು ಏನೇ ಹೇಳಿದರೂ ಅದು ರಿಕಾರ್ಡ್ ಆಗುವುದಿಲ್ಲ. ಅವರು ಹೇಳಿದ್ದು ರಿಕಾರ್ಡ್ ಆಗುವುದಿಲ್ಲ, ಇವರು ಹೇಳಿದ್ದು ರಿಕಾರ್ಡ್ ಆಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರ ಮುಗಿಸಲಿ, ಆ ಮೇಲೆ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಈಗ ನೀವು ಒಂದು ಕೆಲಸ ಮಾಡಬೇಕಾಗುತ್ತದೆ. ಬೇರೆ ಬೇರೆ ವಿಚಾರ ರಿಕಾರ್ಡ್ ಆಗಿಬಿಟ್ಟರೆ ಅದಕ್ಕೆ ನಾವು ಉತ್ತರ ಕೊಡದೇ ಇದ್ದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಇಲ್ಲಿ ನೀವು ಏನು ಹೇಳಿದರೂ ರಿಕಾರ್ಡ್ ಆಗಿಲ್ಲ, ಆವರು ಏನು ಹೇಳಿದರೂ ರಿಕಾರ್ಡ್ ಆಗಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಯಾರಿಗೂ ಅಲೋ ಮಾಡುವುದಿಲ್ಲ. ನೀವು ಮಾತನಾಡಿದ್ದು ರಿಕಾರ್ಡ್‌ಗೆ ಹೋಗುವುದಿಲ್ಲ, ಅವರು ಮಾತನಾಡಿದ್ದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ನೀವು ಪದೇ ಪದೇ ಹೇಳುತ್ತಾ ಇದ್ದೀರಿ ನಾವು ಕೇಳುತ್ತಾ ಇದ್ದೇವೆ.

ಅಧ್ಯಕ್ಷರು.—ಈಗ ಮುಖ್ಯ ಮಂತ್ರಿಗಳು ಉತ್ತರ ಮುಗಿಸುವವರೆಗೆ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಶ್ರೀನಿವಾಸ್‌ರವರೆ, ಇಲ್ಲಿ ಏಕೆ ಬೇಕು ನಿಮ್ಮ ಪಾಯಿಂಟ್ ಆಫ್ ಆರ್ಡರ್.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಕೇಳದೇ ಹೇಳಬೇಕು ಎಂದರೆ ನಾವು ಏನು ಹೇಳುವುದು.

ಅಧ್ಯಕ್ಷರು.—ಆಯಿತು, ಪಾಯಿಂಟ್ ಆಫ್ ಆರ್ಡರ್ ಏನು ಹೇಳಿ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಸದನದ ನಿಯಮಾವಳಿಗಳಲ್ಲಿ ಯಾರು ತಮ್ಮ ಕೃತಿಯನ್ನು ಇಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲಿ ಹಾಜರಿಲ್ಲವೋ ಅವರ ಬಗ್ಗೆ ನೇರವಾಗಿ ಚರ್ಜ್ ಮಾಡುವುದಕ್ಕೆ ಅವಕಾಶವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅವರದೇ ಆದ ಶೈಲಿಯಲ್ಲಿ ಉತ್ತರ ಹೇಳುವುದಕ್ಕೆ ಅಥವಾ ಕೇಳುವ ತಾಳ್ಮೆ ನಮಗೆ ಇದೆ, ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆಥವಾ ನಮ್ಮ ಮಾತುಗಳನ್ನು, ನಮ್ಮ ಭಾಷಣವನ್ನು ಅವರು ಇದ್ದು ಕೇಳಿ ಉತ್ತರ ಕೊಟ್ಟಿದ್ದರೆ ಅಡ್ಡಿಯಿಲ್ಲ. ಅವರಿಗೆ ಯಾವುಯಾವುದೊ ಬೇಕೋ ಅಷ್ಟೇ ಪದಗಳನ್ನು ಜೋಡಣೆ ಮಾಡಿಕೊಂಡು ಅದನ್ನು ಎಲ್ಲಿಬೇಕೋ ಅಲ್ಲಿ ಪ್ರಯೋಗಮಾಡಿ ಉತ್ತರ ಕೊಡುತ್ತಿದ್ದಾರೆ. ಅದು ನಿಜವಾಗಿಯೂ ನೀತಿಯಲ್ಲ. ಎದುರಿಗೆ ಇದ್ದು ನಮ್ಮ ಭಾಷಣಗಳನ್ನು ಗ್ರಹಿಸಿ ಉತ್ತರ ಕೊಟ್ಟಿದ್ದರೆ ನಾನು ಅಡ್ಡಿ ಇರುತ್ತಾ ಇರಲಿಲ್ಲ.

(ಗೊಂದಲ)

---

* * ಅಧ್ಯಕ್ಷರ ಆದೇಶದಂತೆ ತೆಗೆದುಹಾಕಲಾಗಿದೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಪಾಯಿಂಟ್ ಆಫ್ ಆರ್ಡರ್ ಹೇಳುತ್ತಾ ಇದ್ದರೆ ಅವರು ಡಿಸ್ ಆರ್ಡರ್ ಮಾಡುವುದು ಸರಿಯಲ್ಲ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳದ್ದು ಒಂದು ಪರಿಷ್ಕಾರ ಇದೆ. ಯಾವುದೇ ವಿಷಯ ತೆಗೆದುಕೊಂಡರೂ ಅವರು ಮದ್ರಾಸ್ ಗಡಿ ದಾಟಿ ಅತ್ತ ವಿಂಧ್ಯಪರ್ವತ ದಾಟಿ ಹೋಗದೆ ಅವರು ಉತ್ತರ ಕೊಡಲಿಕ್ಕೆ ಬರುವುದಿಲ್ಲ.

ಇಲ್ಲಿ ನಡೆದಿರತಕ್ಕ ಚರ್ಚೆಯ ಭಾಗವನ್ನು ತೆಗೆದುಕೊಂಡು ಅವರು ಉತ್ತರ ಕೊಡುವುದಿಲ್ಲ. ಅವರು ಯಾವುದೇ ಉತ್ತರ ಕೊಡಬೇಕಾದರೂ ಕೇಂದ್ರ ಸರ್ಕಾರ ಬೇಕು. ಶ್ರೀಮತಿ ಇಂದಿರಾಗಾಂಧಿಯವರ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಅವರು ಎದುರಿಗೆ ಇದ್ದಾರೆಯೆ ? ಈ ವಿಷಯವನ್ನು ಕೇಳುವುದಕ್ಕೆ ನಮಗೆ ಅಧಿಕಾರ ಇಲ್ಲವೆ? ನೀವು ಮೂರುವರ್ಷಗಳ ಕಾಲ ಜನತಾ ಪಕ್ಷದವರು ಕೇಂದ್ರದಲ್ಲಿ ಏನೇನು ಮಾಡಿದ್ದೀರಿ, ಅದರ ಬಗ್ಗೆ ಇಲ್ಲಿ ಡಿಬೇಟ್ ಮಾಡಿದರೆ ನೀವು ಉತ್ತರ ಕೊಡುತ್ತೀರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್,—ಆದ್ದರಿಂದ ಇದು ಸರಿಯಲ್ಲ. ಯಾವ ಉದಾಹರಣೆ ತೆಗೆದುಕೊಂಡರೆ ಕೇಂದ್ರ ಸರ್ಕಾರ ಏನು ಮಾಡಿದೆಯೆಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮುಖ್ಯಮಂತ್ರಿಗಳಿಗೆ ವಿಷಯ ಗೊತ್ತಿದ್ದರೂ ಕೂಡ ಇಲ್ಲಿ ಉತ್ತರ ಕೊಡುವುದಕ್ಕೆ ಯಾವರೀತಿಯ ಅಧಿಕಾರವೂ ಇಲ್ಲ. ಆ ರೀತಿ ವಾದ ಮಾಡುವುದರಲ್ಲಿ ಏನೂ ಅರ್ಥ ಇಲ್ಲ. ತಾವು ಇದರ ಬಗ್ಗೆ ಬೇರೆ ವೇದಿಕೆ ಬಳಕೆ ಮಾಡಿಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಪಾಯಿಂಟ್ ಆಫ್ ಆರ್ಡರ್

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನ ಪಾಯಿಂಟ್ ಆಫ್ ಆರ್ಡರ್, ಮಾನ್ಯ ಶ್ರೀನಿವಾಸ್‌ರವರು ಎತ್ತಿದ ವಿಷಯಕ್ಕೆ ಸಪೋರ್ಟ್ ಮಾಡಿ, ಹೇಳಬೇಕಾಗುತ್ತದೆ. ತಾವು ರೂಲಿಂಗ್ ಕೊಡುವ ಮುನ್ನ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ರೂಲಿಂಗ್ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಿರಿಯ ಸದಸ್ಯರಾದ ಶ್ರೀನಿವಾಸ್‌ರವರು ಎತ್ತಿರತಕ್ಕಂಥದ್ದು ಬಹಳ ಪ್ರಾಮುಖ್ಯವಾದ ವಿಚಾರ. ಅದಕ್ಕೆ ಪುಷ್ಟಿ ಕೊಡಬೇಕೋ ಬೇಡವೋ ?

ಅಧ್ಯಕ್ಷರು.—ಆಯಿತು, ಕೂಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ,—ತಾವು ರೂಲಿಂಗ್ ಕೊಡುವ ಮೊದಲು, ಸಮಾಧಾನದಿಂದ ಆಲಿಸಬೇಕು.

ಶ್ರೀ ಕೆ. ಎಸ್. ನಾಗರತ್ನಮ್ಮ.—ಮೊಯಿಲಿಯವರು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಾಮಿ, ನಾವು ಇಲ್ಲಿ ಮಂಡಲ್ ಪಂಚಾಯ್ತಿಗೆ ಮಾಡತಕ್ಕನಾವು ಕರಣದ ವಿಷಯದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಅದಕ್ಕೆ ಸೀಮಿತವಾದ ಚರ್ಚೆ ನಡೆಯುವಾಗ, ಸನ್ಮಾನ್ಯ ಮುಖ್ಯಮಂತ್ರಿಗಳು ಬಂದು ಇದಕ್ಕೆ ಉತ್ತರ ಕೊಡಬೇಕೆಂದು ನಿರೀಕ್ಷೆ ಮಾಡಿಕೊಂಡು ನಾವುಗಳೆಲ್ಲಾ ಕುಳಿತ್ತಿದ್ದೇವೆ. ಆದರೆ, ಮಾನ್ಯ ಮುಖ್ಯಮಂತ್ರಿಗಳ ೭೭ರ ದಶಕದ ಹಿಂದಿನ ಕಥೆ, ಹರಿಕಥೆ ಕೇಳಲಿಕ್ಕೆ ನಾವು ಕುಳಿತುಕೊಂಡಿಲ್ಲ. ನಾವು ಅವರ ಭಕ್ತರಲ್ಲ ಸನ್ಮಾನ್ಯ ಮುಖ್ಯಮಂತ್ರಿಗಳ ಭಕ್ತ ಮಂಡಲಿ, ಬಾಂಬೆನಲ್ಲಿ, ದೆಹಲಿಯಲ್ಲಿ ಇರಬಹುದು. ನನ್ನ ಪಾಯಿಂಟ್ ಆಫ್ ಆರ್ಡರ್...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಮುಖ್ಯಮಂತ್ರಿಗಳು. ಚುನಾವಣೆ ವಿಚಾರ ಪಾರ್ಲಿಮೆಂಟ್ ಮಾಡಿದಂಥ ಕಾನೂನಿನ ವಿಚಾರ, ಸುಪ್ರೀಂಕೋರ್ಟು ಅಥವಾ ಹೈಕೋರ್ಟು ಮಾಡಿರತಕ್ಕಂಥ

ತೀರ್ಮಾನ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಅಧಿಕಾರ ಇಲ್ಲ ಸದನಕ್ಕೂ ಅಧಿಕಾರ ಇಲ್ಲ ಏಕೆಂದರೆ, ಕಾನೂನಿಗೆ ಸಂಬಂಧಪಟ್ಟಂತೆ, ಚುನಾವಣೆಗೆ ಸಂಬಂಧಪಟ್ಟಂತೆ ಸುಪ್ರೀಂಕೋರ್ಟು, ಹೈಕೋರ್ಟು, ತೀರ್ಮಾನ ಮಾಡಿದೆ ಪಾರ್ಲಿಮೆಂಟ್ ಅದರ ಬಗ್ಗೆ ತಿದ್ದುಪಡಿ ತಂದಿರುವ ವಿಚಾರದಲ್ಲಿ, ಅದರ ಪ್ರೊಪ್ರೈಟಿ ಬಗ್ಗೆ ಇಲ್ಲಿ ಚರ್ಚೆ ಮಾಡತಕ್ಕಂಥ ಅಧಿಕಾರ ಮುಖ್ಯಮಂತ್ರಿಗಳಿಗೂ ಇಲ್ಲ ಸದನಕ್ಕೂ ಇಲ್ಲ, ತಾವು ಆ ವಿಚಾರದಲ್ಲಿ ಮಾತು ಬೆಳಸಲಿಕ್ಕೆ ಅವಕಾಶ ಕೊಡಬಾರದು. ಮಾನ್ಯ ಮುಖ್ಯಮಂತ್ರಿಗಳನ್ನು ಸರಿಯಾದ ಹಳಿಗೆ ತಂದು ನಾಮಕರಣದ ಬಗ್ಗೆ ಉತ್ತರ ಕೊಡುವಂಥ ಒಂದು ದೊಡ್ಡ ಉಪಕಾರವನ್ನು ತಾವು ಮಾಡಬೇಕೆಂದು ಕೇಳುತ್ತೇನೆ. ಅವರು ಕೊಡುವಂಥ ಉತ್ತರವನ್ನು ಸಾವಧಾನವಾಗಿ ಕೇಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾಮಕರಣ ಮಾಡುವ ಸಿದ್ಧಾಂತದಲ್ಲಿ ಸಂಪೂರ್ಣ ನಂಬಿಕೆ ಇದ್ದರೆ ವಿಶ್ವಾಸ ಇದ್ದರೆ ಮಾಡಲಿ. This is an inderfensible Act. ಆದರೆ, ಇಲ್ಲಿ ವಿಷಯಾಂತರ ಮಾಡಿ ರಾಜಕೀಯ ಬಳಸುವುದು ಬೇಡ.

ಶ್ರೀ ಎಂ. ಪಿ. ಪ್ರಕಾಶ್.—ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುವಾಗ ಅದರ ವೈಚಾರಿಕತೆ ಹಾಗೂ ಐತಿಹಾಸಿಕ ಆಯಾಮಗಳನ್ನು ಕುರಿತು ಮಾತನಾಡಬೇಕಾಗುತ್ತದೆ. ಸನ್ಮಾನ್ಯ ವಿರೋಧಿ ಮಿತ್ರರುಗಳ ವಾದದಲ್ಲಿನ ಹಾಗೂ ನೀತಿಯಲ್ಲಿನ ದ್ವಂದ್ವತೆಯನ್ನು ಮಾತ್ರ ಪ್ರಸ್ತಾಪ ಮಾಡುತ್ತಿದ್ದಾರೆಯೇ ಹೊರತು, ಸದನವನ್ನು ಬೇರೆ ಕಾರಣಗಳಿಗೆ ಉಪಯೋಗಿಸುತ್ತಿಲ್ಲ. ತಮ್ಮ ನೀತಿಗಳ ದ್ವಂದ್ವತೆಯನ್ನು ಪ್ರಸ್ತಾಪ ಮಾಡುವಾಗ ಶ್ರೀನಿವಾಸ ಅವರು ಆಕ್ಷೇಪ ಮಾಡಿದರು. ಅವರ ನೀತಿ ಅವರಿಗೆ ಪ್ರಿಯವಾಗಿರುವುದರಿಂದ ಹಾಗೆ ಮಂಡನೆ ಮಾಡಬೇಕಾಗಿಲ್ಲ. ಕಳೆದ ಎರಡು ದಿವಸಗಳಿಂದ ಜನತಾ ಪಕ್ಷ ತೆಗೆದುಕೊಂಡಿರತಕ್ಕ ಐತಿಹಾಸಿಕ ನಿಲುವಿನ ಬಗ್ಗೆ, ತಾವು ಏನೊಂದು ದ್ವಂದ್ವ ವಾದ ಇಟ್ಟಿದ್ದೀರಿ ಆದರ ಬಗ್ಗೆ ಮಾತನಾಡಿದ್ದಾರೆಯೇ ವಿನಹ ಬೇರೆ ಇಲ್ಲ. ನಿಮ್ಮ ಬಗ್ಗೆ ಬೇರೆ ಅಭಿಪ್ರಾಯಗಳನ್ನು ಅವರು ವ್ಯಕ್ತ ಮಾಡಲಿಲ್ಲ. ಪಾರ್ಲಿಮೆಂಟರಿ ಪದ್ಧತಿಯಲ್ಲಿ ನಿಯಮಗಳಿಗೆ ಒಳಗಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾಡಿರತಕ್ಕ ಪ್ರಸ್ತಾಪಗಳನ್ನು ಒಂದು ವೇದಿಕೆ ಎಂದು ಪರಿವರ್ತನೆ ಮಾಡಿ ಲಘುವಾಗಿ ಮಾತನಾಡತಕ್ಕದ್ದು ಸರಿಯಾದುದು ಅಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ ಇಲ್ಲಿ ಯಾರೂ ಲಘುವಾಗಿ ಮಾತನಾಡಲಿಕ್ಕೆ ಬಂದಿಲ್ಲ. ನಾನು ಸಾವಧಾನವಾಗಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದನ್ನು ಕೇಳುತ್ತಿದ್ದೇನೆ. ಅವರು ಇದ್ದ ಹಾಗೆ, ನಾನು ಇಲ್ಲಿ ೨೫ ವರ್ಷ ಇದ್ದೆ, ಇಲ್ಲಿ ನಡೆದಿರುವ ಕಾಯಿದೆಗಳನ್ನು ನಡವಳಿಕೆಗಳನ್ನು ನಾನು ನೋಡಿಕೊಂಡು ಬಂದಿದ್ದೇನೆ. ಅದಕ್ಕೆ ನಾನು ಸುಮ್ಮನೆ ಕೇಳುತ್ತಿದ್ದೆ. ಶ್ರೀಮತಿ ಇಂದಿರಾಗಾಂಧಿಯವರು ಸತ್ತು ಸ್ವರ್ಗಕ್ಕೆ ಹೋಗಿ ಎಷ್ಟುದಿವಸ ಆಗಿದೆ. ಅದು ನಾನು ಮಾಡಿದೆ ಇದು ನಾನು ಮಾಡಿದೆ. ಅದು ಹೀಗೆ ಇದು ಹಾಗೆ ಎಂದರೆ ಹೇಗೆ ನಾವು ಮಾತನಾಡುತ್ತಿರುವುದು ಮಂಡಲ್ ಪಂಚಾಯತ್‌ಗಳ ಪ್ರಧಾನ ಮತ್ತು ಉಪಪ್ರಧಾನಗಳ ಎಲೆಕ್ಷನ್ ಬಗ್ಗೆ ಹಾಗಾದರೆ ಟಿಪ್ಪು ಸುಲ್ತಾನ ಕಾಲದ್ದು ತೆಗೆದುಕೊಂಡು ಬಂದು ಮಾತನಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈಗ ಎಲ್ಲಿಯವರೆಗೆ ನಾವು ಮಾನ್ಯ ಮೊಯಿಲಿಯವರು ಕೀರ್ತನೆ ಪಾಡಿದ್ದನ್ನು ಸುಮ್ಮನೆ ಬಾಯಿಮುಚ್ಚಿಕೊಂಡು ಕೇಳುತ್ತೇವೆಯೋ, ಅಲ್ಲಿಯವರೆಗೆ ನಮ್ಮ ಹರಿಕಥೆಯನ್ನು ಅವರು ಕೇಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗದರೆ ಈಗ ಹರಿಕಥೆ ಮಾಡುತ್ತಿದ್ದೀರೇನು ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಕಿನ್ನರಿ ಬಾರಿಸಿದರೆ ಅದು ನಿಮಗೆ ವಿರೋಧ ಕಂಡರೆ ನಾವು ಏನು ಮಾಡೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮಗೆ ಕಿನ್ನರಿ ಬಾರಿಸಲಿಕ್ಕೆ ಗೊತ್ತಿಲ್ಲ ಏತಕ್ಕೆ ಸುಮ್ಮನೆ ಅದನ್ನು ಬಾರಿಸಬೇಕೆಂದು ಹೇಳುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ್ ಅವರು ಯಾರು ಇಲ್ಲಿ ಡಿಫೆಂಡ್ ಮಾಡಲಿಕ್ಕೆ ಶಕ್ತಿ ಇಲ್ಲವೋ ಅಂತಹವರ ಹೆಸರನ್ನು ಏತಕ್ಕೆ ಹೇಳಿದಿರಿ ಎಂದು ಹೇಳಿದರು. ನಾನು ಯಾರ ಹೆಸರನ್ನು ತೆಗೆದೆ ?

ಶ್ರೀ ಕೆ. ಹೆಚ್. ಶ್ರೀನಿವಾಸ್,—ಅದಂ ನಿವಂಗೆ ಗೊತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ನಾನು ಯಾರ ಹೆಸರೂ ತೆಗೆದಿಲ್ಲ. ಬೇಕಾದರೆ ರೆಕಾರ್ಡ್ ತೆಗೆದಂನೋಡಬಹುದು ನಾನು ಯಾರ ಹೆಸರನ್ನು ತೆಗೆದಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಹೆಸರನ್ನು ತೆಗೆಯಬೇಕಾಗುತ್ತದೆ. ಆದರೆ, ಅವರ ಮೇಲೆ ಏನಾದರೂ ಆಪಾದನೆ, ಆರೋಪ ಮಾಡಿದರೆ. ಅವರು ತಮ್ಮನ್ನು ರಕ್ಷಣೆ ಮಾಡತಕ್ಕಂಥ ಸ್ಥಿತಿ ಇಲ್ಲದೇ ಇರುವುದರಿಂದ ಅಂತಹ ಸಂದರ್ಭದಲ್ಲಿ ನಾವು ಇಲ್ಲಿ ಉಲ್ಲೇಖ ಮಾಡತಕ್ಕದ್ದು ಸರಿಯಲ್ಲ. ಈಗ ಅವರ ಮನಸ್ಸಿನಲ್ಲಿ ಏನಿದೆ ಎಂದರೆ, ನಾನಂ ಹೇಳಿದಂಥ ಮಾತಂ ಶ್ರೀಮತಿ ಇಂದಿರಾಗಾಂಧಿಯವರಿಗೆ ಅನ್ವಯಿಸುತ್ತದೆಂದಂ ಅವರಂ ತಿಳಿದುಕೊಂಡರೆ ನನ್ನ ಆಕ್ಷೇಪ ಇಲ್ಲ. ಈಗ ಶ್ರೀಮತಿ ಇಂದಿರಾಗಾಂಧಿಯವರ ಮೇಲೆ ನಾನು ಆಪಾದನೆ ಮಾಡಿದೆನೆಯೇ ? ಅಥವಾ ಶ್ರೀಮತಿ ಇಂದಿರಾಗಾಂಧಿಯವರ ಹೆಸರು ಅನ್ ಮೆನ್‌ಷನಬಲ್ಲೇನು ? ಅನ್‌ಪಾರ್ಲಿಮೆಂಟರಿಯೇನು? ನಾನು ಹಾಗೆ ತಿಳಿದುಕೊಂಡಿಲ್ಲ. ಈ ದೇಶಕ್ಕೆ ಒಬ್ಬ ಪ್ರಧಾನಮಂತ್ರಿ ಎಂದು ಇರುವಾಗ, ಎಲ್ಲಿಯವರೆಗೆ ಅವರು ಇರುತ್ತಾರೆ. ಅಲ್ಲಿಯವರೆಗೆ ಪ್ರಧಾನಮಂತ್ರಿಗಳ ಹೆಸರನ್ನು, ಪ್ರಧಾನಮಂತ್ರಿಗಳಂ ಮಾಡಿದ್ದನ್ನು, ಪ್ರಧಾನಮಂತ್ರಿಗಳ ನೀತಿಯನ್ನು ಇಲ್ಲಿ ಚರ್ಚೆ ಮಾಡಲಿಕ್ಕೆ ನಮಗೆ ಅಧಿಕಾರ ಇದೆ. ಇವೊತ್ತು ಚರ್ಚೆ ಅಂದರೆ ಏನಂ ಅರ್ಥ ಇವೊತ್ತು ನಿಮ್ಮ ಚರ್ಚೆಯಲ್ಲಿ ಬೇರೆ ಬೇರೆ ತರಹದ ವಿಷಯಂಗಳು ಬರುವುದಿಲ್ಲವೇನು? ಮಾನ್ಯ ಅಧ್ಯಕ್ಷರೆ, ನಾನು ಹಿಂದುಳಿದವರ ವಿಚಾರದ ಬಗ್ಗೆ ಹೇಳಿದೆ. ಮಂಡಲ್ ಕಮಿಷನ್ ರಿಪೋರ್ಟ್ ಬಗ್ಗೆ ಹೇಳಿದಾಗ ಯಾವ ಸರ್ಕಾರ ಅದನ್ನು ಒಪ್ಪಲಿಲ್ಲ ಎಂದು ಹೇಳುವಂಥಾದು ತಪ್ಪೇ, ಆ ರೀತಿ ಹೇಳಬಾರದೆ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದೇ ಕಾಂಗ್ರೆಸ್ ಸರ್ಕಾರ ಎನ್ನುವುದನ್ನು ಮಾತ್ರ ತಾವು ಬಿಟ್ಟು ಬಿಡುತ್ತೀರಿ.

ಅಧ್ಯಕ್ಷರು.—ಅವರು ಮಾತನಾಡುವುದಕ್ಕೆ ನೀವು ಅವಕಾಶವನ್ನು ಮಾಡಿಕೊಡುತ್ತೀರೋ ಇಲ್ಲವೋ? ನೀವು ಆ ರೀತಿ ನಿಂತು ಮಾತನಾಡಬೇಡಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಇವರ ಉದ್ದೇಶ ಏನು ಎಂದು ನನಗೆ ಕಾಣಿಸುತ್ತಿದೆ, ಅವರು ಹೇಳುವುದನ್ನೆಲ್ಲಾ ಹೇಳಿದ್ದಾಯಿತು. ನಾವು ಕಳೆದ ೨ ದಿವಸಗಳಿಂದ ಸುಮ್ಮನೆ ಕುಳಿತು ಕೇಳುತ್ತಿದ್ದೇವೆ. ಆದರೆ ಈ ಕಡೆಯಿಂದ ಉತ್ತರ ಕೊಡುವಾಗ ಮಾತ್ರ ಅವರು ಹೇಳಿದ ಮಾತಿನ ಖಂಡನೆ ಏನಿದೆ ಅದು ಬೇರೆ ಜನರಿಗೆ ಗೊತ್ತಾಗಬಾರದು ಎಂದು ಕೊಂಡು ಈ ರೀತಿ ನಾವು ಮಾತನಾಡುವುದಕ್ಕೆ ಇವರು ಅಡ್ಡಿಪಡಿಸುತ್ತಿದ್ದಾರೆ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ತವಂಗೂ ಗೊತ್ತು. ನಾನಂ ಭಾಷಣ ಮಾಡಂವುದಕ್ಕೆ ಎದ್ದಾಗ ಅವರಂ...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧ ಪಕ್ಷದ ನಾಯಂಕರು ಮಾತನಾಡುವಾಗ ಒಂದಂ ಸೂಜಿ ಬಿದಿದ್ದರೂ ಕೇಳಿಸುತ್ತಿತ್ತು. ಅಷ್ಟು ನಿತ್ಯಬ್ಧವಾಗಿ ನಾವು ಕೇಳಿದ್ದೇವೆ. ಅಷ್ಟು ಗಹನವಾದ ಗಮನಕೊಟ್ಟು ಕೇಳಿದ್ದೇವೆ. ನಿಮ್ಮ ಹಿಂದೆ ಮತ್ತು ನಿಮ್ಮ ಪಕ್ಕದಲ್ಲಿರತಕ್ಕವರಿಗೆ ಕಿವಿಯನ್ನು ಹಿಂಡುವುದು ಅಗತ್ಯವಿದೆ ಎಂದು ನಾನು ಹೇಳುತ್ತೇನೆ. ಅದು ಏನೇ ಇರಲಿ, ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಒಂದಂ ಮಾತನ್ನು ಹೇಳಿದರು. ಅದು ರೆಕಾರ್ಡ್‌ನಲ್ಲಿ ಹೋಗುವುದು ಸರಿಯಿರಲಿಲ್ಲ ನಾನು ಕಾಂಗ್ರೆಸ್‌ಗೆ ಮೋಸಮಾಡಿದ್ದೇನೆ ಎಂದಂ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ನಾರಾಯಣಗೌಡರವರು ಹೇಳಿದರು...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳಿದ್ದರಿಂದ ನಾನು ಹೇಳಿದೆ. ಇಲ್ಲದಿದ್ದರೆ ನಾನಂ ಹೇಳುತ್ತಿರಲಿಲ್ಲ.

ಅಧ್ಯಕ್ಷರು,—ನೀವು ಮಾತನಾಡುವಾಗ, ನೀವು ಹೇಳುವಾಗ ಅವರು ಒಬ್ಬರಾದರೂ ಕೂಡ ತುಟಿ ಪಿಟಿಕ್ ಎಂದು ಅನ್ನಲಿಲ್ಲ. ಈಗ ಅವರು ಮಾತನಾಡುವುದಕ್ಕೆ ನಿಂತರೆ ನೀವು ಏತಕ್ಕೆ ಎದ್ದು ನಿಲ್ಲುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಾವೂ ತಿಳಿದುಕೊಳ್ಳಬೇಕು, ಒಂದು ಸಾರಿ ಒಬ್ಬ ಸದಸ್ಯರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರೆ ಅದು ರೆಕಾರ್ಡ್‌ಗೆ ಹೋಗುತ್ತದೆ. ಅದು ಈ ದೇಶದ ಜನರಿಗೆ ಗೊತ್ತಾಗುತ್ತದೆ. ಅದಕ್ಕೆ ಉತ್ತರವನ್ನು ಕೊಡದಿದ್ದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ನಿಮಗೂ ನಾನು ಅವಕಾಶವನ್ನು ಕೊಟ್ಟಿದ್ದೇನೆ, ಅವರಿಗೂ ನಾನು ಅವಕಾಶವನ್ನು ಕೊಟ್ಟಿದ್ದೇನೆ. ಅವರು ಹೇಳುವುದು ಏನೂ ಗೊತ್ತಾಗಬಾರದೆಂದು ನಿಮ್ಮ ಉದ್ದೇಶವೆ?

ಶ್ರೀ ಎಸ್. ಬಂಗಾರಪ್ಪ.—ನೀವು ಅನಕಾಶವನ್ನು ಕೊಟ್ಟಿದ್ದೀರಿ, ಸಂತೋಷ. ಆದರೆ ಅವರು ಬೇರೆ ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ...

(ಗೊಂದಲ)

ಅಧ್ಯಕ್ಷರು.—ಈಗ ನೀವು ಏನೂ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ ದಯವಿಟ್ಟು ಕುಳಿತುಕೊಳ್ಳಿ ನೀವು ಏನು ಹೇಳಿದ್ದೀರಿ ಅದನ್ನೆಲ್ಲಾ ಎಕ್ಸ್‌ಪಂಜ್ ಮಾಡಿಸಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಅವರು ಹೇಳಿದ್ದನ್ನೂ ರೆಕಾರ್ಡ್‌ನಿಂದ ತೆಗೆಸಿಹಾಕಿ

ಅಧ್ಯಕ್ಷರು.—ನೀವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ ಅವರು ಹೇಳುವುದೂ ರೆಕಾರ್ಡ್‌ಗೆ ಹೋಗುವುದಿಲ್ಲ, ನೀವು ಹೇಳುವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಪಂಚಮ್ಖಿ ಮಂತ್ರಿಗಳು ಒಬ್ಬರನ್ನು ಬಿಟ್ಟು ಉಳಿದವರು ಯಾರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈಗ ಅವರು ಉತ್ತರ ಕೊಡುತ್ತಿದ್ದಾರೋ ? ಅಥವಾ ನಾನು ಉತ್ತರ ಕೊಡುತ್ತಿದ್ದೇನೋ ?

ಅಧ್ಯಕ್ಷರು.—ನೀವು ಉತ್ತರ ಕೊಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಶ್ರೀಮತಿ ನಾಗರತ್ನಮ್ಮನವರೇ ಇದು ಏನು ಪದ್ಧತಿ? ಅವರು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗುವುದಿಲ್ಲ, ನೀವು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗುವುದಿಲ್ಲ ನಾನು ಈಗ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದಿದ್ದೇನೆ. ಅವರು ಮಾತನಾಡುವಾಗ ಅವರೊಬ್ಬರನ್ನು ಬಿಟ್ಟು ಆ ಕಡೆಯವರಾಗಲಿ, ಈ ಕಡೆಯವರಾಗಲಿ ಯಾರು ಏನು ಮಾತನಾಡಿದರೂ ಕೂಡ ಅದು ರೆಕಾರ್ಡ್‌ಗೆ ಹೋಗುವುದಿಲ್ಲ,

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನಾನು ಕಾಂಗ್ರೆಸ್‌ಗೆ ದ್ರೋಹ ಬಗೆದವನಲ್ಲ...

SRI S. BANGARAPPA.—You cannot now say anything on that matter, since that matter has been removed from the record.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳಿದ್ದನ್ನು ತೆಗೆದಮೇಲೆ ಅವರು ಹೇಳಿದ್ದನ್ನೂ ಇನ್ನು ಅವರು ರಿಪ್ಲೈ ಕೊಡುವ ಅವಶ್ಯಕತೆಯೇ ಇಲ್ಲ. Where is matter of record?

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ ನೀವು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗ್ಬೇ ವುದಿಲ್ಲ, ಅವರು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಮಾನ್ಯ ಮುಖ್ಯ ಮಂತ್ರಿಗಳೂ ಮಾತನಾಡಲಿ. ಮೊನ್ನೆಯು ದಿವಸ ನಿಮಗೆ ಮಾತನಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳುತ್ತಿರುವುದು ಸಂತೋಷ. ಆದರೆ ಈ ವಿಚಾರದಲ್ಲಿ ನಾನೂ ಹೇಳುತ್ತಿಲ್ಲ...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಅವರು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗು ವುದಿಲ್ಲ, ನೀವು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ ನಾನು ಯಾವ ಪಕ್ಷಕ್ಕೂ ದ್ರೋಹ ಮಾಡಿದ ವನಲ್ಲ. ಯಾರ ಬೆನ್ನಿಗೂ ಚೂರಿ ಹಾಕಿದವನಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಯವರು ಯಾವಾಗಲೂ ಚಾಕಿ ಚೂರಿಯೆಂದು ಬಳಸುತ್ತಲೇ ಇರುತ್ತಾರೆ. ಅವರು ಹೇಳಿದ ವಿಚಾರವನ್ನು ರೆಕಾರ್ಡ್‌ನಿಂದ ತೆಗೆಸಬೇಕು. ಈಗ ಅವರು ಹೇಳಿದನ್ನು ತೆಗೆದು ಹಾಕಿಸಿ.

(ಗೊಂದಲ)

ಅಧ್ಯಕ್ಷರು.—ನೀವು ಏನೇ ಹೇಳಿ ನಾನು ತಮ್ಮನ್ನು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೇನೆ. ತಾವು ಕುಳಿತುಕೊಳ್ಳಿ, ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಲಿ ಎಂದು ಹೇಳುತ್ತೇನೆ. ದಯವಿಟ್ಟು ಎಲ್ಲರೂ ಸಹಕರಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನೀವು ಕೊಟ್ಟ ರೂಲಿಂಗ್‌ಗೆ ವಿರುದ್ಧ ಮಾಡಿ ದಂತಾಗುತ್ತದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನೀವು ಕುಳಿತುಕೊಳ್ಳಿ. ಏತಕ್ಕೆ ನೀವು ಇಷ್ಟೊತ್ತು ಇಷ್ಟು ಸಿಟ್ಟಾಗಿದ್ದೀರಿ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಇದು ಬಹಳ ವಿಷಾದನೀಯವೆಂದು ಹೇಳು ತ್ತೇನೆ. ಇದು ಚರ್ಚೆ ಮಾಡತಕ್ಕಂಥ ರೀತಿಯಲ್ಲ. ಕೂಗಾಡತಕ್ಕಂಥದ್ದು ಸಭ್ಯತೆಯಲ್ಲ.

ಶ್ರೀ ಎಸ್. ಬಂಗಾರಪ್ಪ,—ನಿಮ್ಮದೂ ಸಭ್ಯತೆಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಯಾವ ರೀತಿ, ಇದು ಸಭ್ಯತೆಯೇ ?

ಅಧ್ಯಕ್ಷರು.—ಮಾನ್ಯ ವೊಯಲಿಯವರೇ ತಾವಾದರೂ ಅವರಿಗೆ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ —ಕೆಲವು ಜನರು ಈಗಾಲಾದರೂ ಕಲಿಯಬೇಕು,

ಶ್ರೀ ಎಸ್. ಬಂಗಾರಪ್ಪ.—ನಿಮ್ಮಿಂದ ಕಲಿಯಬೇಕಾಗಿಲ್ಲ. ನಿಮಗೆ ಸಭ್ಯತೆ ಮೊದಲು ಇಲ್ಲವೇ ಇಲ್ಲ. ನಿಮ್ಮಿಂದ ನಾನು ಸಭ್ಯತೆಯನ್ನು ಕಲಿಯಬೇಕಾಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಈಗ ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗು ವುದಿಲ್ಲ, ಏತಕ್ಕೆಂದರೆ ನಿಮ್ಮ ಕಡೆಯವರು ಅವರು ಮಾಡಿದಂಥ ಚರ್ಚೆಗೆ ಸಮರ್ಪಕವಾಗಿ, ಸರ್ಕಾರಿಕ ವಾಗಿ ಉತ್ತರವನ್ನು ಪಡೆಯುವುದಿಲ್ಲವೇ ? ಆದರೆ ಇಷ್ಟು ಮಾತ್ರ ಹೇಳಬಯಸುತ್ತೇನೆ ನಾಮಕರಣದ ಮುಖಾಂತರ ಯಾವ ರೀತಿಯ ದುರುದ್ದೇಶ ಸಾಧನೆ ಮಾಡಿಕೊಳ್ಳಬೇಕೆಂಬುದು ನಮ್ಮ ಇಚ್ಛೆಯಲ್ಲ ನಾಮಕರಣ ಮಾಡತಕ್ಕಂಥದ್ದು ವಿಚಾರ ಸರ್ಕಾರದ್ದಲ್ಲ. ನಾಮಕರಣ ಮಾಡತಕ್ಕಂಥ ನಿರ್ಣಯ

ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಆದುದೆಂ. ಆದ್ದರಿಂದ ನಾಮಕರಣದ ವಿಚಾರದಲ್ಲಿ ನಮ್ಮ ಸರ್ಕಾರದ ನೀತಿ ಅತ್ಯಂತ ಸ್ಪಷ್ಟವಾಗಿ ಇದೆ. ಎಲ್ಲಿಯವರೆಗೆ ಈ ಕಾಯಿದೆ ಆಕಸ್ಮಾತ್ತಾಗಿ ಆಸಿಂಧು ಎಂದು ಆದರೆ ಮಾತ್ರ ನಾಮಕರಣದ ಹೋಗಬಹುದು. ಈಗ ಅದು ಹೈಕೋರ್ಟಿನಲ್ಲಿ ಇದೆ, ಆದಕ್ಕಾಗಿ ಈ ವಿಚಾರವನ್ನು ಹೇಳುವುದಕೆ. ಹೋಗುವುದಿಲ್ಲ. ಎಲ್ಲಿಯವರೆಗೆ ಈ ನಿರ್ಣಯವನ್ನು ಈ ಮನೆ ಒದಲಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸರ್ಕಾರ ಇದಕ್ಕೆ ಬದ್ಧವಾಗಿರುತ್ತದೆಂದು ಹೇಳುತ್ತೇನೆ. ಎರಡನೆಯದಾಗಿ ಈ ಸರ್ಕಾರ ಪ್ರಜಾ ಪ್ರಭುತ್ವದಲ್ಲಿ ಅಚಲವಾದ ನಿಷ್ಠೆ ಮತ್ತು ಪ್ರಜಾತಂತ್ರದ ಮೌಲ್ಯಗಳನ್ನು ಎತ್ತಿ ಹಿಡಿಯತಕ್ಕದ್ದು,

ಒಬ್ಬ ಮಾನ್ಯ ಸದಸ್ಯರು.—ಮೌಲ್ಯ.

ಶ್ರೀ ರಾಮಕೃಷ್ಣ ಹೆಗಡೆ.—ಅದೇ ಬಾಯಿ ತಪ್ಪಿಯಾದರೂ ಬರುತ್ತದೆ ಮೌಲ್ಯ. ಇದನ್ನು ಕಾಯ್ದಿಕೊಂಡು ಹೋಗತಕ್ಕಂಥ ಏನು ಒಂದು ಅಚಲವಾದ ನಿರ್ಧಾರವನ್ನು ನಾವು ಮಾಡಿದ್ದೇವೆ ಅದನ್ನು ನೀವು ಯಾವುದೇ ರೀತಿಯಲ್ಲಿ ಟೀಕೆ ಮಾಡಿದರೂ ಅದು ಆ ಜಾಗದಿಂದ ಅಚಲವಾಗುವುದಿಲ್ಲ ವೆಂದು ಹೇಳುತ್ತೇನೆ. ಯಾವ ಉದ್ದೇಶ ಸಾಧನೆಗೋ ಏನೋ ಗೊತ್ತಿಲ್ಲ, ಅವರು ಈ ವಿಚಾರದಲ್ಲಿ ಉದ್ವೇಗ ಮಾಡಬೇಕು ಎನ್ನುವುದು ಇದ್ದರೆ ಅವರ ಮನಸ್ಸಿಗೆ ತೃಪ್ತಿಯಾಗಿರಬಹುದು. ತಾವು ಹೇಳಿದ್ದನ್ನೆಲ್ಲ ಕೇಳಿದ್ದೇವೆ, ಇನ್ನು ಮುಂದಾದರೂ ನಾವು ಹೇಳುವುದನ್ನು ದಯವಿಟ್ಟು ಕೇಳಿ ಎಂದು ಹೇಳುತ್ತೇನೆ.

ಶ್ರೀ ಪಿ. ಎಂ.

ನೀವು ಯಾವ ರೀತಿ ಮಾಡುತ್ತೀರಿ ಅದೇ ರೀತಿ ಈ ಕಡೆ ಕಂಳಿತ ಸದಸ್ಯರು ಮಾಡಿದರೆ ಯಾವ ವಿಷಯದ ಬೇಲೂ ಚರ್ಚೆ ಆಗುವುದಕ್ಕೆ ಸಾಧ್ಯವಿಲ್ಲ. ನಾವು ಏನಾದರೂ ಅವಾಚ್ಯವಾಗಿ ಮಾತನಾಡಿದರೆ, ಅನ್‌ಪಾರ್ಲಿಮೆಂಟರಿ ಶಬ್ದ ಹೇಳಿದರೆ, ಯಾರೂ ಈ ಮನೆಯಲ್ಲಿ ಸಮರ್ಥನೆ ಮಾಡಿಕೊಳ್ಳಲು ಸಾಧ್ಯವಿಲ್ಲ ಅಂಥವರ ಬೇಲೆ ವ್ಯಕ್ತಿಗತವಾಗಿ ಆರೋಪ ಮಾಡಿದರೆ, ರೂಲ್ಸ್ ಏನಿದೆ ಅದಕ್ಕೆ ವಿರುದ್ಧವಾಗಿ ಮಾತನಾಡಿದರೆ, ವಿರುದ್ಧವಾಗಿ ಕ್ರಮ ತೆಗೆದುಕೊಂಡರೆ ಅದಕ್ಕೆ ತಾವು ಏನು ರೂಲಿಂಗ್ ಕೊಡುತ್ತೀರೋ ಅದಕ್ಕೆ ಬದ್ಧರಾಗಿರುತ್ತೇವೆ. ನಾವು ಎಂದೂ ಅಂಥ ಕೆಲಸವನ್ನು ಮಾಡಿಲ್ಲ. ಆದರೆ ಚರ್ಚೆಯ ಉದ್ದೇಶ ಪರಸ್ಪರ ವಿಚಾರ ವಿನಿಮಯ ಆಗಬೇಕಂ ಮತ್ತು ನಮ್ಮ ನಿಮ್ಮ ನೀತಿಯ ಮಂಡನೆ ಈ ಮುಂಬಯಿಂತರ ರಾಜ್ಯದ ಜನತೆಯ ಮುಂದೆ ಆಗಬೇಕೆಂದು ಇದ್ದರೆ ಶಾಂತಿಯುತವಾದ ವಾತಾವರಣದಲ್ಲಿ ಆಗಬೇಕು ಮತ್ತು ಯಾವ ರೀತಿ ನೀವು ಕೊಡಲಿಕ್ಕೆ ತಯಾರಿರುತ್ತೀರೋ ಅದೇ ರೀತಿ ತೆಗೆದುಕೊಳ್ಳುವುದಕ್ಕೂ ತಯಾರಿರಬೇಕು, ಇಷ್ಟು ಮಾತ್ರ ಸ್ಪಷ್ಟವಾಗಿ ಹೇಳಬಯಸುತ್ತೇನೆ, ಸರ್ಕಾರದ ನೀತಿಯಲ್ಲಿ ಯಾವುದೇ ರೀತಿಯ ಮಾರ್ಪಾಡು ಇಲ್ಲವೆಂದು ಪುನಃ ಪುನಃ ಹೇಳಬಯಸುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆ ಕೊನೆ ಕೊನೆಗೆ ಬೇರೆ ಕಡೆ ಹೋಯಿತು. ನಾವು ಏನು ಅನೇಕ ವಿಚಾರಗಳನ್ನು ಇಲ್ಲಿ ಎತ್ತಿದ್ದೇವೆ ಅದರ ಬಗ್ಗೆ ತಮ್ಮಿಂದ ಉತ್ತರ ಬರಲಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲರನ್ನು ಎಬ್ಬಿಸಿ ಹೇಳಿ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖರ್ಗೆಯವರೇ ಕೇಳಿ. ನಿಮ್ಮ ಕಣ್ಣಾದರೂ ನಂಬಬೇಡವೆ? ಎಲ್ಲಿ ಎಂದು ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೇಳುತ್ತಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಅವರಿಗೆ ಸಮಾಧಾನ ಮಾಡಿದ್ದೇನೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಯಾವುದಕ್ಕೂ ಉತ್ತರ ಕೊಡುವುದಿಲ್ಲ. ಉತ್ತರ ಕೊಡಲಿಕ್ಕೆ ಭಂಗ ಮಾಡಿದರು, ಉತ್ತರ ಕೇಳುವುದಕ್ಕೆ ತಾಳ್ಮೆ ಇಲ್ಲ, ಸೌಜನ್ಯ ಗಳಿಸಲಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಗಿದೆ. ನೀವು ಅಮೆಂಡ್‌ಮೆಂಟ್ ಕೊಡಿ. ಇದನ್ನು ಓಟಿಗೆ ಹಾಕುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಎತ್ತಿದಂಥ ಅನೇಕ ಪ್ರಶ್ನೆಗಳಿಗೆ ತಾವು ಉತ್ತರ ಕೊಟ್ಟಿಲ್ಲ

ಅಧ್ಯಕ್ಷರು.—ಉತ್ತರ ಕೊಡುವುದಿಲ್ಲ, ಉತ್ತರ ಈಗ ಮುಕ್ತಾಯವಾಗಿದೆ. ಚರ್ಚೆಯೂ ಮುಕ್ತಾಯವಾಗಿದೆ. ನೀವು ಏನಾ ಅಮೆಂಡ್‌ಮೆಂಟ್ ಕೊಡುತ್ತೀರಿ ಕೊಡಿ, ಅದನ್ನು ಓಟಿಗೆ ಹಾಕುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮುಖ್ಯ ಮಂತ್ರಿಗಳು ಬಹಳ ಚೆನ್ನಾಗಿ ಮಾತನಾಡಿದರು ಬಹಳ ಸುಂದರವಾದ ಶಬ್ದಗಳಿಂದ ಚೆನ್ನಾಗಿ ಮಾತನಾಡಿದರು ಆದರೆ ನಾವು ಕೇಳಿದ್ದೇನೋ ಅವರ ಹೇಳಿದ್ದೇನೋ ಆಯಿತು. ಮೂಕ ಹೇಳಿದ, ಕಿವುಡ ಕೇಳಿದ ಅಂದ ಹಾಗೆ ಆಯಿತು. ನಾವು ಕೇಳಿದ್ದು ಎರಡೇ ಪ್ರಶ್ನೆ, ಜಾಸ್ತಿ ಕೇಳಲಿಲ್ಲ. ಚುನಾವಣೆ ಆದಮೇಲೆ ೪ ವಾರಗಳೊಳಗೆ ಪ್ರಧಾನ ಮಂತ್ರಿ ಉಪ ಪ್ರಧಾನದ ಚುನಾವಣೆ ಆಗಬೇಕಾಗಿತ್ತು. ಆದು ಏತಕ್ಕೆ ಆಗಲಿಲ್ಲ ? ಎರಡನೆಯದಾಗಿ, ನಿಮ್ಮ ರೂಲ್ಸ್‌ನಲ್ಲಿ ಇದ್ದದ್ದು ಒಂದು, ಆಮೇಲೆ ಬ್ಯಾಕ್‌ವರ್ಡ್ ಕ್ಲಾಸ್ ಎಂಬುದಕ್ಕೆ ನೀವು ಕೊಟ್ಟಿರತಕ್ಕ ಅರ್ಥವೇ ಬೇರೆ ಆದು ಆ್ಯಕ್ಟಿನಲ್ಲಿ ರೂಲ್‌ನಲ್ಲಿ ಇರಲಿಲ್ಲ. ಏತಕ್ಕೆ ಸುಮ್ಮನೆ ಮೌಲ್ಯ ಮೌಲ್ಯ. ಮೌಲ್ಯವನ್ನು ತ್ತೀರಿ. ಎಷ್ಟು ಮೌಲ್ಯ ? ಎಷ್ಟು ತೂಕ. ಎಷ್ಟು ಆಗಲ. ಎಷ್ಟು ಉದ್ದ, ಎಷ್ಟು ಉತ್ತರ ಈ ಮೌಲ್ಯಕ್ಕೆ ? ನಾವು ಕೇಳಿದುದು ಎರಡೇ ಪ್ರಶ್ನೆ. ಎರಡಕ್ಕೂ ಉತ್ತರವಿಲ್ಲ. ನಾವು ಹೇಳಿದ್ದು ಕೇಳುವುದಿಲ್ಲವೆಂದರೆ ನಾವು ಅಂಥ ಅನಾಗರೀಕರಲ್ಲ. ಸಂಸ್ಕೃತಿ ಇಲ್ಲವರು ಅಲ್ಲ ನಾವು, ಹೇಳಿದ್ದನ್ನೆಲ್ಲ ಕೇಳಿಂವುದಕ್ಕೆ ಇಲ್ಲಿ ಕುಳಿತುಕೊಂಡಿದ್ದೇವೆ ಆದರೆ ಮೌಲ್ಯದ ಭಾರ ಎಷ್ಟಿದೆ. ಎಷ್ಟಗಲ ಎಷ್ಟು ಇದೆ. ತೂಕ ಎಷ್ಟಿದೆ ತೂಕ ನೋಡುವುದಕ್ಕೆ ನಾವು ಕುಳಿತಿದ್ದೇವೆ. ಅದರ ಬಗ್ಗೆ ತಮ್ಮಿಂದ ಒಂದು ಶಬ್ದವೂ ಇಲ್ಲ. ೪ ವಾರಗಳೊಳಗೆ ಏತಕ್ಕೆ ಚುನಾವಣೆಯನ್ನು ಮಾಡಲಿಲ್ಲ ? ನಿಮ್ಮದು ಒಂದು ಆಧಾರ ಕ್ಯಾಲೆಂಡರ್ ಆಫ್ ಈವೆಂಟ್ಸ್ ಹಾಕಿ ಪಾಪಸ್ಸು ತೆಗೆದುಕೊಂಡದ್ದು, ಬ್ಯಾಕ್‌ವರ್ಡ್ ಕಮ್ಯೂನಿಟಿಯ ರೂಪುರೇಷೆ ಯಾವ ರೀತಿ ಇದೆ ಅದು ಬೇರೆ. ಎಷ್ಟು ಬದಲಾವಣೆ ಮಾಡುವುದು ಎಂದು ಕೇಳಿದೆ. ಅದಕ್ಕೆ ಉತ್ತರ ಇಲ್ಲ ಮುಂದಾದರೂ ಹೇಳಿದ್ದನ್ನು ಕೇಳಿ ಜೀವನ ಮಾಡಿಕೊಳ್ಳಿ ಎಂದು ಹೇಳಿದ್ದನ್ನು ಕೇಳಿಕೊಂಡು ಮನೆಗೆ ಹೋಗೋಣ. ಶಾಭಾಶ್‌ಗಿರಿ ಕೊಡಿ. ನೀವು ಹೇಳಿದ್ದು ಒಳ್ಳೆಯದಾಗಿದೆ. ಮೊದಲು ಹೆಗಡೆಯವರು ಮಾಡುತ್ತಿರುವುದು ಸರಿ ಎಂದು ಹೇಳಿಂವುದಕ್ಕೆ ಮೊದಲು ನನ್ನ ಒಂದು ಮಾತು ಇದೆ. ಈ ತರಹ ಅವರು ಹೇಳಿದ್ದು ಕೇಳಿಕೊಂಡು ಮನೆಗೆ ಹೋಗಂವುದಕ್ಕಲ್ಲ ನಾವು ಬಂದಿರಂವುದು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಉತ್ತರ ಕೊಡಂವುದಿಲ್ಲ. ಏಕೆಂದರೆ ಮಾನ್ಯ ವಿರೋಧಪಕ್ಷದ ನಾಯಂಕರು ಎತ್ತಿದಂಥ ಎರಡಂ ವಿಚಾರವೂ ಹೈಕೋರ್ಟ್ ಮುಂದೆ ಇದೆ. ತಡ ಏತಕ್ಕಾಯಿತು ಮಶ್ತ್ರಿ ಯಾರನ್ನು ಬ್ಯಾಕ್‌ವರ್ಡ್‌ಕ್ಲಾಸ್ ಡೆಫನಿಷನ್‌ನಲ್ಲಿ.....

ಶ್ರೀ ಎಂ. ವೀರಪ್ಪ ಮೊಯಿಲಿ.—ರೂಲ್ಸನ್ನು ನಿಮ್ಮ ಖುಷಿಗೆ ತಕ್ಕಂತೆ ಬದಲಾವಣೆ ಏತಕ್ಕೆ ಮಾಡಿದಿರಿ ? ಎರಡೆರಡು ಸಾರಿ ರೂಲ್ಸ್ ಬದಲಾವಣೆ ಮಾಡುವುದಕ್ಕೆ ಕಾನೂನು ಇದೆಯೆ ?

ಅಧ್ಯಕ್ಷರು.—ನೋಡಿ, ಇದನ್ನು ನಾಗರತ್ನಮ್ಮನವರು, ವಿರೋಧಪಕ್ಷದ ನಾಯಕರು ಹೇಳಿದ್ದಾರೆ

ಶ್ರೀ ಎಂ. ವೀರಪ್ಪ ಮೊಯಿಲಿ.—ಉತ್ತರ ಕೊಡಲಿಕ್ಕೆ ಏನೂ ಉಳಿದೇ ಇಲ್ಲ.

ಅಧ್ಯಕ್ಷರು.—ಓಟಿಗೆ ಹಾಕುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಎರಡು ವಿಚಾರಗಳೂ ಹೈಕೋರ್ಟ್ ಮುಂದೆ ಇರುವುದರಿಂದ ನಾನು ಅದಕ್ಕೆ ಉತ್ತರ ಕೊಡುವುದಿಲ್ಲ. ಶ್ರೀಮತಿ ನಾಗರತ್ನಮ್ಮನವರು ಹೇಳಿದರು ಅವರು ನಾಗರೀಕರು ಎಂದು ವೈಯಕ್ತಿಕವಾಗಿ ಅದನ್ನು ಒಪ್ಪುತ್ತೇನೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಉತ್ತರದಿಂದ ನಮಗೆ ಸಮಾಧಾನ ಆಗಿಲ್ಲ. ನಾನು ಕೇಳಿದಂಥ ಪ್ರಶ್ನೆಗೆ ಯಾವ ಉತ್ತರವೂ ಬರಲಿಲ್ಲ. ನಾಮಿನೇಷನ್‌ನಿಂದ ಇವರು ಫೋರ್ ಅನ್ಯಾಯ ಮಾಡುತ್ತಿದ್ದಾರೆ ಆದ್ದರಿಂದ ಇದನ್ನು ಪ್ರತಿಭಟಿಸಿ ನಾವು ವಾಕ್ ಔಟ್ ಮಾಡುತ್ತೇವೆ

(ಕಾಂಗ್ರೆ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಹೊರಗೆ ಕಾಲಿಟ್ಟು ಮತ್ತೆ ಎಲ್ಲರೂ ಬನ್ನಿ.

ಶ್ರೀ ರಾಮಕೃಷ್ಣ ಹೆಗಡೆ.—ಇಂಥ ನಾಟಕದಿಂದ ಜನರಿಗೆ ಏನೂ ಇಂಪ್ರೆಸ್ ಆಗುವುದಿಲ್ಲ.

MR. SPEAKER.—I will now put the motion to the vote of the House.

The question is that:

for the existing clause and proviso thereto, the following clause shall be substituted

> "(2) 'Backward Classes' means the Backward communities Backward Castes and Backward Tribes notified by the Government in Order No. DPAR 1 SRC 77, dated 4th March 1977 or in such other order as may be issued from time to time."

The motion is lost

The earlier proviso stands unaltered

ಖಾಸಗೀ ಸದಸ್ಯರ ನಿರ್ಣಯಗಳು

ಪಾನ ನಿರೋಧಕ್ಕೆ ಬದಲಿ ನೀತಿ ಹಾಗೂ ವ್ಯವಸ್ಥೆಯ ಬಗ್ಗೆ ಉನ್ನತ ಮಟ್ಟದ ಸಮಿತಿಯನ್ನು ನೇಮಿಸುವುದು.

ಅಧ್ಯಕ್ಷರು.—ಈಗ ಖಾಸಗೀ ಕಾರ್ಯಕಲಾಪಗಳು. ೧೯೮೬ನೇ ಫೆಬ್ರುವರಿ ೭ ರಂದು ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಮಂಡಿಸಿರುವ ಈ ಕೆಳಕಂಡ ನಿರ್ಣಯದ ಮೇಲೆ ಚರ್ಚೆ ಮುಂದುವರೆಸುವುದು

ನಿರ್ಣಯ.—

> "ಮದ್ಯಪಾನಕ್ಕೆ ಸಂಬಂಧಿಸಿದ ರಾಜ್ಯದಲ್ಲಿ ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀಸಾಮಾನ್ಯರ ಹಾಗೂ ಬಡಜನರ ಹಿತಕ್ಕೆ ಮಾರಕವಾಗಿ ಪರಿಣಮಿಸಿರುವುದರಿಂದ ಈಗಾಗಲೇ ನಡೆದಿರುವ ದುರಂತಗಳು, ಅವುಗಳ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಪಾನನಿರೋಧವೂ ಸೇರಿದಂತೆ ಬದಲಿ ನೀತಿ ಹಾಗೂ ವ್ಯವಸ್ಥೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.....

ಇದರ ಬಗ್ಗೆ ಯಾರಾದರೂ ಮಾತನಾಡಿ ಮಾನ್ಯ ಪ್ರಕಾಶ್ ಅವರೆ ಮಾತನಾಡಿ ಮಾನ್ಯ ತಂಗಳಿ ಅವರೆ, ನೀವು ಮಾತನಾಡುತ್ತೀರಾ ? ಮಾನ್ಯ ಶಾಣಪ್ಪನವರೆ, ನೀವು ಮಾತನಾಡುತ್ತೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಮಾತನಾಡುತ್ತೇವೆ ಎಂದಾಗ ಬೇಡ ಎಂದು ಹೇಳುತ್ತೀರಿ. ಈಗ ಎಲ್ಲರಿಗೂ ಮಾತನಾಡಿ ಎಂದು ಹೇಳುತ್ತಿದ್ದೀರಿ.